M Subraya

ಯಕ್ಷಗಾನ

ವಿಭೀಷಣ ನೀತಿ

—:ಅರ್ಥ ಸಹಿತ:—

ಸೀತಾನದಿ ಗಣಪಯ್ಯ ಶೆಟ್ಟಿ.



ಸುಬೋಧ ಸಾಹಿತ್ಯ ಭಂಡಾರ

ಹಿರಿಯಡಕ ಪ. ಕ.

ಬೆಲೆ ರೂ. 1-00

॥ ಶ್ರೀ ರಾಮಚಂದ್ರ ಪರಬ್ರಹ್ಮಣೇ ನಮಃ॥

ಯಕ್ಷಗಾನ

ವಿಭೀಷಣ ನೀತಿ.

—ಃಅರ್ಥ ಸಹಿತಃ—

ಸೀತಾನದಿ ಗಣಪಯ್ಯ ಶೆಟ್ಟಿ.

1976.

ಸುಬೋಧ ಸಾಹಿತ್ಯ ಭಂಡಾರ

ಹಿರಿಯಡಕ (ದ.ಕ.)

ಮುದ್ರಕರುಃ-

ಅಶೋಕ ಪ್ರಿಂಟರ್ಸ್ ಹಿರಿಯಡಕ.

ಬರೆದವನ ಬಿನ್ನಹ.

ನಮ್ಮ ದೇಶದಲ್ಲಿ ಪ್ರಚಲಿತವಿರುವ ಗ್ರಂಥಗಳಲ್ಲಿ ರಾಮಾಯಣ, ಮಹಾಭಾರತಗಳಿಗೆ ಮಹತ್ವದ ಸ್ಥಾನವಿದೆ. ಇವು ಇತಿಹಾಸ ಕಾವ್ಯಗಳೆನಿಸಿದ್ದರೂ, ಧಾರ್ಮಿಕ, ನೈತಿಕ, ವ್ಯಾವಹಾರಿಕ ಸಿದ್ಧಾಂತಗಳನ್ನು ಹೃದಯಂಗಮವಾಗಿ ಬೋಧಿಸಿ, ಜನಮನ ತಿದ್ದುವಲ್ಲಿ ಇವುಗಳ ಪಾತ್ರ ಮಹೋನ್ನತವಾದುದು.

ಆ ಕಥಾನಕಗಳನ್ನು ಜನಸಾಮಾನ್ಯರಿಗೆ ಸುಲಭಗ್ರಾಹ್ಯವಾಗಿ ಬೋಧಿಸುವಲ್ಲಿ, ದೃಶ್ಯವಾಗಿ ಪ್ರದರ್ಶಿಸುವಲ್ಲಿ ಯಕ್ಷಗಾನವು ವಿಶಿಷ್ಟ ಪಾತ್ರ ವಹಿಸಿರುವುದು ಸರ್ವವೇದ್ಯ.

ರಾಮಾಯಣದಲ್ಲಿ ಸೀತಾಪಹಾರ ಮಾಡಿದ ರಾವಣನಿಗೆ ನೀತಿ ಬೋಧೆ ಮಾಡಿದವರಲ್ಲಿ ವಿಭೀಷಣ ಪ್ರಮುಖನು ಅವನು ತನ್ನ ಅಣ್ಣನ ಅಕಾರ್ಯವನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ, ವಿಹಿತ ಮಾರ್ಗ ಬೋಧಿಸಿದ ರೀತಿ ಅನ್ಯಾದೃಶ್ಯವಾಗಿದೆ. ಈ ಭಾಗ ಯಕ್ಷಗಾನದಲ್ಲಿಯೂ ಚೆನ್ನಾಗಿ ಒಡಮೂಡಿ ಹೃದಯಂಗಮವಾಗಿದೆ ಈ ಯಕ್ಷಗಾನ ಕೃತಿಗೆ ಕವಿಹೃದಯಕ್ಕೆ ಅಪಚಾರವಾಗದಂತೆ, ಪಾತ್ರ ಗೌರವಕ್ಕೆ ಬಾಧೆ ಬಾರದಂತೆ ಪ್ರಸಂಗೋಚಿತವಾಗಿ ಅರ್ಥ ಬರೆಯಲಾಗಿದೆ. ಯಕ್ಷಗಾನಾಭ್ಯಾಸಿಗಳಿಗೆ ಇದು ಮಾರ್ಗದರ್ಶಕವಾದೀತೆಂಬ ಭರವಸೆಯಿದೆ.

ಈ ಹಿಂದೆ ಅರ್ಥ ಬರೆದು ಪ್ರಕಟಿಸಿದ ಶ್ರೀಕೃಷ್ಣಸಂಧಾನ, ಸುಧನ್ವಕಾಳಗ, ದಕ್ಷಾಧ್ವರ-ಗಿರಿಜಾಕಲ್ಯಾಣ, ಮಾಗಧವಧೆ ಮೊದಲಾದ ಕೃತಿಗಳಿಗೆ ಜನತೆ ತೋರಿದ ಉದಾರಾಶ್ರಯಗಳಿಗೆ ಕೃತಜ್ಞತೆ ಸಲ್ಲಿಸಿ, ಈ ಕುಸುಮವನು ಯಕ್ಷಗಾನ ಪ್ರಿಯರಿಗೆ ಅರ್ಪಿಸಿರುತ್ತೇನೆ. ಕೈಸೇಡಿ ಪರಿಗ್ರಹಿಸುವಿರೆಂದು ನಂಬಿರುತ್ತೇನೆ.

ಹಿರಿಯಡಕ — ಇತಿ ತಮ್ಮವ

ತಾ 5--2--1976 — **ಸೀತಾನದಿ ಗಣಪಯ್ಯ ಶೆಟ್ಟಿ**

ॐ

ಶ್ರೀ.ಗಣೇಶಾಯನಮಃ

(ಶ್ರೀ ಸೀತಾರಾಮ ಚಂದ್ರಾಯನಮ:)

ಯಕ್ಷಗಾನ.

ವಿಭೀಷಣ ನೀತಿ

(ಅರ್ಥ ಸಹಿತ)

ವಸಂತ ತಿಲಕಾ ವೃತ್ತ

ಶ್ರೀ ರಾಮ ಚಂದ್ರ ರಘು ನಂದನ ರಾಜವರ್ಯ ರಾಜೇಂದ್ರ ಸುರನಾಯಕ ರಾಘವೇಶ।
ರಾಜಾಧಿರಾಜ ರಘುನಂದನ ರಾಮಭದ್ರ ದಾಸೋ ऽಸ್ಮ್ಯಹಂ ಚ ಭವತಃ ಶರಣಾಗತೋಽಸ್ಮಿ॥

ರಾಗ—ಸಾಂಗತ್ಯ—ರೂಪಕತಾಳ.

ತನಯರು ಕೇಳಿ ರಾಘುವನು ಕೈಯಲಿ ಚೂಡಾ। ಮಣಿಯನ್ನು ಕೊಂಡು ದುಃಖಿ ಸುತ॥ ವನಿತೆಯ ಮೇಲಣ ಮಮಕಾರದಿಂದಲಾ। ದಿನಕರ ತನುಜಗಿಂತೆಂದ॥೧॥

ಶ್ರೀ ರಾಮಃ- ಪ್ರಪಂಚದಲ್ಲಿ ಜನಿಸಿ, ಜೀವಿಸುವವರೆಲ್ಲರೂ ಸುಖ ಅಪೇಕ್ಷಿಸುತಿದ್ದಾರೆ. ಆದರೆ ಸುಖ ಎಲ್ಲರಿಗೂ ಲಭ್ಯವಲ್ಲ. ಅನುಪಮ ಅಧಿಕಾರದಿಂದ, ಅತುಲ ಐಶ್ವರ್ಯದಿಂದ, ಪ್ರೀತಿಯ ಬಂಧುಗಳಿಂದ, ರೂಪವತಿ ಗುಣವತಿಯೊದ ಸತಿಯಿಂದ, ಅತಿ ಶಕ್ತಿಯಿಂದ, ಸುಖ ಹೊಂದ ಬಹುದೆಂದು ಹಂಬಲಿಸುವವರಿರಬಹುದು. ಆದರೆ ಅದೆಲ್ಲ ವ್ಯರ್ಥ;ಕೇವಲಭ್ರಮೆ. ಸುಖಪಡೆಯ ಬೇಕಾದರೆ ಅದೃಷ್ಟ ಬೇಕು. ಹಾಗಲ್ಲದಿದ್ದರೆ ನಮ್ಮ ಜೀವನ ಸುಖದಿಂದ ವಂಚಿತವಾಗಬೇಕೇ? ನನಗೆಯಾವುದರಲ್ಲಿ ಕೊರತೆಯಿತ್ತು?
ಅಧಿಕಾರ ದೃಷ್ಟಿಯಿಂದ ನೋಡಿದರೆ, ಆರ್ಯಾವರ್ತದ ಮಹಾಚಕ್ರವರ್ತಿಯ ಉತ್ತರಾಧಿಕಾರಿ; ಜೀವನಮಾತ್ರ ಕಾಡಿನಲ್ಲಿ.ಐಶ್ವರ್ಯದಲ್ಲಿ ನೋಡಿದರೆ, ಅಷ್ಟಭಾಗ್ಯ ಅಷ್ಟ ಭೋಗಗಳಿಗೆ ಆಶ್ರಯಸ್ಥಾನ ನಮ್ಮ ಅಯ್ಯೋಧ್ಯೆ; ನಾವುಣ್ಣುತ್ತಿರುವುದ ಕಂದ ಮೂಲ.ಪ್ರೀತಿಯ ಬಂಧುಗಳಿಗೆ ಕೊರತೆಯೆ?

ಆದರೆ ಅವರೆಲ್ಲ ಅಲ್ಲಿ; ನಾವು ಮಾತ್ರ ಇಲ್ಲಿ. ಲೋಕೋತ್ತರ ರೂಪವತಿ, ಗುಣವತಿ, ವಿದ್ಯಾಬುದ್ಧಿ ಸಮನ್ವಿತೆ, ಪತಿಪರಾಯಣೆ ಭೂಜಾತೆಯೇ ಧರ್ಮಪತ್ನಿ; ಆದರೆ ಈಗ ಅವಳೆಲ್ಲಿ ನಾನೆಲ್ಲಿ! ಪ್ರಪಂಚದ ಘನವಿಕ್ರಮಿಗಳನ್ನು ಕಂಗೆಡಿಸಿದ ಹರಧನುವನ್ನು ಭಂಗಿಸಿದೆ; ಕ್ಷತ್ರಿಯ ಕುಲಕುಠಾರ ಪರಶುಧರನ ಗರ್ವ ಹಿಂಗಿಸಿದೆ; ಇಷ್ಟಿದ್ದರೂ ಸುಖ ಕನಸಿನ ಮಾತಾಯಿತು. ನೆರಳಿನಂತೆ ಹಿಂಬಾಲಿಸಿಬಂದ ಈ ಸಹೋದರ ಲಕ್ಷ್ಮಣ ಜೊತೆಗಿರದಿದ್ದರೆ ಪ್ರಾಣವುಳಿಯುತಿತ್ತೋ ಇಲ್ಲವೋ.

ಇಷ್ಟಾದರೂ ಸತ್ಯಧರ್ಮಗಳನ್ನು ನಾವು ಬಿಡಲಿಲ್ಲ; ಸತ್ಯಧರ್ಮಗಳೂ ನಮ್ಮ ಕೈ ಬಿಡಲಿಲ್ಲ. ಕಾಡಿನಲ್ಲಿ ನಾವಿಲ್ಲದಾಗ ಸೀತೆ ಅಪಹೃತಳಾದಳು; ಮರದ ಮೇಲಿನ ಹಕ್ಕಿ ವರದಿ ಮಾಡಿತು. ತಿನಲುಬಂದ ವಿರಾಧಮಾರ್ಗ ತೋರಿಸಿದ. ಕಷ್ಟಕ್ಕೆ ತುತ್ತಾಗಿ ಕಂಗೆಟ್ಟಿದ್ದ ಸುಗ್ರೀವ ಇಷ್ಟಮಿತ್ರನಾದ. ಗುಣವಂತ, ಧೀಮಂತ, ಹನುಮಂತ ಸೇವೆಗೆ ಸಿದ್ಧನಾದ. ಧರಣಿಜೆಯ ಅನ್ವೇಷಣೆಗಾಗಿ ಹೊರಟು ಶರಧಿಯನ್ನುತ್ತರಿಸಿದ. ದುರ್ಗಮವಾದ ಲಂಕೆ ಪ್ರವೇಶಿಸಿ, ಸೀತೆಯನ್ನು ನೋಡಿದ. ನಾವಿತ್ತ ಮುದ್ರೆಯುಂಗರ ನೀಡಿದ. ರಕ್ಕಸರ ವನ ಧೂಳೀಪಟ ಮಾಡಿದ. ರಾವಣನನ್ನು ಕಾಡಿವ ವೈಭವದ ಲಂಕಾನಗರ ದಹಿಸಿದ. ಸೀತೆಯನ್ನು ಕಂಡ ಕುರುಹಿಗಾಗಿ ಚೂಡಾಮಣಿ ತಂದುನೀಡಿದ. ಅನಾಗರಿಕರೆಂದೆನಿಸಿಕೊಂಡ ಈ ವಾನರರು ಸುಸಂಸ್ಕೃತರೆನಿಸಿಕೊಂಡವರಿಗೆ ಯಾವುದರಲ್ಲಿ ಕಡಿಮೆ?

ಮಿತ್ರ ಸುಗ್ರೀವ,ಅಪಾರವಾದ ನಿಮ್ಮ ಪ್ರೀತಿ ವಿಶ್ವಾಸಗಳಿಗೆ ನಾನೆಷ್ಟು ಕೃತಜ್ಞನಾಗಿದ್ದರೂಸಾಲದು. ನಾಗರಿಕರೆನಿಸಿಕೊಂಡ ನಮಗಿಂತ ನೀವೆಷ್ಟೋ ಮೇಲು. ಮಾಡಿದ ಅಲ್ಪ ಉಪಕಾರ ಮರೆಯದೆ, ಹಿಂಡುಬಳಗಕೂಡಿ ಬಂದು, ಹೊಟ್ಟೆಬಟ್ಟೆಗೂ ನಮ್ಮನ್ನಾಶ್ರಯಿಸದೆ, ವೇತನ ಅಪೇಕ್ಷಿಸದೆ, ಪರ ಹಿತಾರ್ಥವಾಗಿ ಎಷ್ಟೊಂದು ಆಸಕ್ತಿಯಿಂದ ದುಡಿಯುತ್ತಿರುವಿರಿ? ಇಂತಹ ಹಿರಿಯ ಗುಣವುಳ್ಳವರನ್ನು ಅನಾಗರಿಕರೆಂದು ಭಾವಿಸುವವರಿಗೆ ಏನೆನಬೇಕು?

ಸುಗ್ರೀವಃ— ದೇವ, ಪರುಷ ಸೋಕಿದರೆ ಕಬ್ಬಿಣವೂ ಸುವರ್ಣವಾಗುವುದು. ನಮ್ಮಲ್ಲಿರುವ ಗುಣವಣುವನ್ನು ಮಹತ್ತೆಂದು ಹೇಳುವ ತಮ್ಮ ಹೃದಯ ವೈಶಾಲ್ಯ ಎಷ್ಟೆಂಬುದು ನಮ್ಮ ಊಹೆಗೂ ನಿಲುಕಲಾರದು. ಅದನ್ನೇ ದೈವೀಗುಣವೆಂದುಭಾವಿ ಸಿದ್ದೆವೇ. ತಮ್ಮ ಸೇವೆಯಿಂದ ಧನ್ಯರಾಗಬೇಕೆಂದು ನಿರ್ಧರಿಸಿದ್ದೇವೆ

ಶ್ರೀರಾಮಃ-ಸುಗ್ರೀವ ನಿಮ್ಮ ಮೈತ್ರಿಯ, ಸಾಹಸದ ಫಲ ಇಲ್ಲಿದೆ ನೋಡು. ಇದೇ ನನ್ನ ಸೀತೆ ಧರಿಸಿದ್ದ ಚೂಡಾಮಣಿ. ಅಹಾ. ಇದನ್ನು ನೋಡನೋಡುತ್ತ ನನ್ನ ಹೃದಯದಲ್ಲಿ ದುಃಖದ ಕಾರ್ಮೋಡ ಕವಿಯುತ್ತಿದೆ. ಪ್ರಪಂಚವೆಲ್ಲ ಕತ್ತಲೆಯೊವರಿತವಾದಂತೆ ತೋರುತ್ತಿದೆ. ಈ ಚೂಡಾಮಣಿಗೂ ಈ ಗತಿಯೊದಗಿತಲ್ಲ? ಹೇ ಶಿವನೇ

ರಾಗ--ಭೈರವಿ--ಝಂಪೆ ತಾಳ

ಅತಿಶಯದ ಸಾಗರದ | ಮಥನದಲಿ ಜನಿಸಿ ಸುರ | ಪತಿಯಿಂದ ಬಂತೆ ಮಣಿ । ಜನಕ ಭೂವರಗೆ || ೧||

ಶ್ರೀರಾಮ ಃ- ಸುಗ್ರೀವ. ಈ ಚೂಡಾಮಣಿ ಸಾಮಾನ್ಯವಾದುದಲ್ಲ. ಇದರ ಮಹತ್ವ ಹಿರಿದಾದುದು. ಇದರ ಉತ್ಪತ್ತಿ ವಿಚಾರ ತಿಳಿದಿರುವೆಯೊ? ಕೇಳು ಹಿಂದೆ ದೂರ್ವಾಸರ ಶಾಪದ ದೆಸೆಯಿಂದ ಸುರಲೋಕದ ಸಂಪತ್ತೆಲ್ಲವೂ ನಾಶವಾಯಿತು, ಸುರಲೋಕ ಅಸುರರಪಾಲಾಯಿತು. ದೇವತೆಗಳು ಸ್ವರ್ಗದಿಂದ ಹೊರತಳ್ಳಲ್ಪಟ್ಟರು. ಬಳಿಕ ದಾನವರಿಗೆ ಅಮೃತದ ಆಸೆ ಹುಟ್ಟಿಸಿದರು. ಸಾಗರ ಮಥನಕ್ಕೆ ದೇವ ದಾನವರು ಒಂದಾಗಿ ಮುಂದಾದರು. ಮಂದರಾದ್ರಿ ಹೊತ್ತು ತಂದರು. ವಾಸುಕಿಯನ್ನು ನೇಣಾಗಿ ಸುತ್ತಿ, ಸಾಗರ ಮಥಿಸಿದರು. ಆಗ ಜನಿಸಿದ ಹಲವಾರು ಅನರ್ಘ್ಯ ರತ್ನಗಳಲ್ಲಿ ಈ ಚೂಡಾಮಣಿಯೂ ಒಂದು. ದೇವರಾಜನಾದ ಮಹೇಂದ್ರನಿಗಿದ್ರ ಕೊಡಲ್ಪಟ್ಟಿತು. ಕಾಲಾಂತರದಲ್ಲಿ ಮಿಥಿಲಾಧಿಪತಿ ಜನಕ ಮಹಾ ರಾಜನಿಗೆ ಇಂದ್ರನಿಂದ ಬಹುಮಾನವಾಗಿ ದೊರಕಿತು.

ಮಗಳ ವೈವಾಹದಲಿ । ವಶವಾಯಿತೆ ಮ್ಮೊಡನೆ । ತೆಗೆದು ಸಲೆ ಮೋಹದಲಿ । ಕೊಟ್ಟೆನಾಸತಿಗೆ

ಶ್ರೀರಾಮಃ-ಮಿತ್ರಾ, ಸೀರಧ್ವಜ ಜನಕ ಮಹಾರಾಜನಿಗೆ ಯಾಗ ಭೂಮಿಯಲ್ಲಿ ದೊರಕಿದ ಮಗಳೇ ಸೀತೆ. ಆಕೆಯ ವಿವಾಹ ಕಾಲದಲಿ ಮಗಳಿಗೆ ಬಳುವಳಿಯಾಗಿ ಈ ಮಹಾರತ್ನವು ನನ್ನ ಕೈ ಸೇರಿತು. ಪ್ರೀತಿಯ ದ್ಯೋತಕವಾಗಿ ಜಾನಕಿಗೆ ಸ್ವಾನಿತ್ತೆ. ಆಕೆ ಅದನ್ನು ಅತ್ಯಂತ ಪ್ರೀತಿಯಿಂದ ಧರಿಸಿಕೊಂಡಿದ್ದಳು.-ಆದರೆ -

ಏನುಪಾಯದೊಳದನು ಉಳುಹಿ ಕೊಂಡಳೊ ಕಾಣೆ । ಮಾನಿನೀಮಣಿಯು ಬಹುಜಾಣೆಯಹುದಹುದು ॥ ೩ ||

ಶ್ರೀ ರಾಮಃ-ಮಿತ್ರ,ನನ್ನ ಮನೋ ಪ್ರೀತಿಯಾದ ಸೀತೆ ಅರಣ್ಯದಲ್ಲಿ ಅಸು ರನಿಂದಅಪಹರಿಸಲ್ಪಟ್ಟಳು ದಶಕಂಧರನು ಅಂಬರ ಮಾರ್ಗದಲ್ಲಿ ಒಯ್ಯುತಿದ್ದಾಗ, ತನ್ನ ಮೈ ಮೇಲಿನ ಆಭರಣಗಳನ್ನೆಲ್ಲ ತೆಗೆ ತೆಗೆದುಒಗೆದಿದ್ದಳಲ್ಲ? ಅವು ಋಷ್ಯ ಮೂಕದಲ್ಲಿ ದೊರೆತಿದ್ದವೆಂದು ನೀನೆ ತಂದೊಪ್ಪಿಸಿದ್ದೆಯಲ್ಲ. ಆಕಾಲದಲ್ಲಿ ಇ ದೊಂದನ್ನು ಮಾತ್ರ ,ಒಗೆಯದೆ ಏಕೆ ಉಳುಹಿಕೊಂಡಳೋ ತಿಳಿಯದು.ರಕ್ಕಸರ ಕಣ್ಣಿಗೆಬಿದ್ದಿದ್ದರೆ ಈ ಅನರ್ಘ್ಯ ರತ್ನವನ್ನು ಎಂತಾದರೂ ಅಪಹರಿಸದೆ ಬಿಡುತಿರಲಿ ಲ್ಲ. ಹೇಗೆ ಇದನ್ನು ಅಡಗಿಸಿಟ್ಟುಕೊಂಡಳೋ ? ಅಂತೂ ಮಾನಿನೀ ಮಣಿ ಸೀತೆ ಯು ಜಾಣೆಯೆಂಬುದರಲ್ಲಿ ಅನುಮಾನವಿಲ್ಲ ಹಾಗೆ ಉಳುಸಿಕೊಂಡದು ಈಗ ಉಪ ಯೋಗಕ್ಕೆ ಬಂತು .ಇದನ್ನೆಲ್ಲ ಯೋಚಿಸುವಾಗ ನಮ್ಮದುರದೃಷ್ಟ ಎಲ್ಲಿಂದ ಎಲ್ಲಿಗೆ ತಂದಿತು ಎಂದೇ ದುಃಖವಾಗುತ್ತಿದೆ.

ಎಂದಿಗಾದರು ಸತಿಗೆ। ಭೋಗಿಸುವ ಫಲವಿರ್ದ। ಡಂದು ಪರಿಯಂತ ತೆಗೆದಿರಿಸೊ ನೀ ತಮ್ಮ ॥ ೪ ॥

ಶ್ರೀ ರಾಮಃ- ತಮ್ಮ ಲಕ್ಷ್ಮಣ . ಯೋಚಿಸಿದಂತೆ ದುಃಖ ಅಧಿಕವಾಗುತ್ತಿದೆ ಮಿಂಚಿದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ ಇದನ್ನೆಲ್ಲ ಮೈಮೇಲೆ ಧರಿಸುವ ಭಾ ಗ್ಯವಿದ್ದರೆ ಭೂಜಾತೆ ನಮ್ಮ ಜತೆ ಸೇರಿಯಾಳು.ದುರುಳರ ನಾಶವಾದೀತು. ಸತ ಧರ್ಮಗಳಿಗೆ ಜಯವಾದೀತು. ಆ ವರೆಗೆ ಈ ರತ್ನಜೋಪಾನವಾಗಿರಿಸಿ ಕೋ ಒಟ್ಟಾರೆ ಒಡಕು ದೋಣಿಯಲ್ಲಿ ಕುಳಿತವರಿಗೆಲ್ಲ ಗುಟುಕು ನೀರು ಎಂಬ ತೆ ನಿರ್ಭಾಗ್ಯನಾದ ನನ್ನಿಂದ ನಿನಗೂ ಕಷ್ಟ ಮತ್ತು ದುಃಖ. ಆದರೆ ನಮ್ಮ ಗಾಗಿನಿಸ್ವಾರ್ಥದಿಂದ ದುಡಿಯುತ್ತಿರುವ ಈ ಪರೋಪಕಾರಿ ವಾನರರು ನಿಜವಾಗಿ ದೈವಾಂಶ ಸಂಭೂತರೆ ಇರಬೇಕು . ಆದರಲ್ಲೂ—

ಮರುತಸುತ ನಮಗಾಗಿ।ಮಾಡಿದತಿ ಸಾಹಸಕೆ। ಮರೆಯದುಪಕಾರವಿದ ಕೇನಿ ತ್ತರಹುದು ॥ ೫ ॥

ಶ್ರೀರಾಃ-- ಸಹೋದರ. ಈ ವಾಯುಪುತ್ರ ಹನುಮಂತ. ಎಂತಹ ಗುಣವಂತ;ಏನು ಧೀಮಂತ. ಈತನ ಅಪ್ರತಿಮ ಸಾಹಸಕ್ಕೆ ಮೂರು ಲೋಕ ದಲ್ಲಿ ಸರಿಯಾರು? ಈತ ನಮಗಾಗಿ ತೋರಿದ ಧೀರತನಕ್ಕೆ ಎಣೆಯುಂಟೆ? ನೂರು ಯೋಜನದ ವಾರಿಧಿ ಹಾರಿ ದುರ್ಗಮವಾದ ಲಂಕೆಸೇರಿ ರಕ್ಕಸರ ಮಾ ಯೆ ಮೀರಿ, ತನ್ನ ವೀರತ್ವ ತೋರಿ, ನಾರಿ ಜಾನಕಿಯನ್ನು ನೋಡಿ ಮಾತಾಡಿ,

ಲಂಕಾನಗರ ದಡಿಸಿ ಚೂಡಾಮಣಿ ತಂದೊಪ್ಪಿಸಿದ ಅಸ್ಭುತ ಸಾಹಸಿಯಾದ ಮಾರುತಿಯನ್ನು ನೂರು ಜನ್ಮಕ್ಕೂ ಮರೆಯಲು ಸಾಧ್ಯವೇ? ಈ ಮಹೋಪಕಾರವ ಋಣ ತೀರಿಸುವ ದಾರಿ ಯಾವುದು ?

ಧರ್ಮ ಶಾಶ್ವತವಾಗಿ। ಧಾರೆಯೆರೆದೆವು ಒರುವ। ಬ್ರಹ್ಮ ಪಟ್ಟದ ಭಾಗ್ಯ ಹನುಮಂತಗಿಂದು ॥ ೫ ॥

ಶ್ರೀರಾಮಃ- ಚಿರಕಾಲ ಸ್ಮರಿಸುವಂತಹ ಮಹತ್ಕಾರ್ಯಕ್ಕೆ ದೊರಕುವ ಫಲವೂ ಚಿರಕಾಲ ಉಳಿಯುವಂತಹದೇ ಇರಬೇಕು. ಧರಣಿ ಧನಾದಿಗಳೆಲ್ಲವೂ ನಶ್ವರ. ಚಿರಕಾಲ ಉಳಿವ ಅಧಿಕಾರ ಸ್ಥಾನ ಬ್ರಹ್ಮಪಟ್ಟ. ಈಗಿನ ವಿರಿಂಚಿ ಬ್ರಹ್ಮನ ಅಧಿಕಾರಾವಧಿ ಮುಗಿದ ಬಳಿಕ ಬ್ರಹ್ಮಪಟ್ಟವನ್ನು ಈ ವಾಯುಪುತ್ರನಿಗೆ ಧಾರೆಯೆರೆದಿರುವೆನು. ಈ ಮಹಾಧಿಕಾರದ ಭಾಗ್ಯ ಈತನಿಗಿರಲಿ.

ವಾರ್ಧಕ

ಮರುತ ನಂದನಗಾಯಿತಜನ ಸಂಪದವೆಂದು । ಸುರಪಾಲ ಮುಂತಾದ ಸುರರೆಲ್ಲ ಜಯವೆನುತ। ಸುರಿದರುಂಬರದಿಂದ ಪೂಮಳೆಯ ದೇವ ದುಂದುಭಿ ಮೊಳಗಿತಾಕಾಶದಿ ||

ಸುಗ್ರೀವಃ- ದೇವಾ, ಅದೇನು ದಿವ್ಯ ನಿನಾದ ಕೇಳುತ್ತಿದೆ? ಹೌದು। ದೇವ ದುಂದುಭಿ ಮೊಳಗುತ್ತಿದೆ. ಪುಷ್ಪವೃಷ್ಟಿಯಾಗುತ್ತಿದೆ. ಈ ಮೂಲಕ ದೇವತೆಗಳು ತಮ್ಮ ಆನಂದ ವ್ಯಕ್ತಪಡಿಸುತಿದ್ದಾರೆ. ಯಾಕಾಗಿರಬಹುದು? ಓಹೋ, ಹನುಮಂತನಿಗೆ ದೇವರ ಅನುಗ್ರಹವಾದುದಕ್ಕಾಗಿ. ಬ್ರಹ್ಮಪಟ್ಟ ದೊರಕಿತೆಂಬುದಕ್ಕಾಗಿ ಪ್ರಭೂ, ಹನುಮಂತ ಧನ್ಯನಾದ ಮಾತ್ರವಲ್ಲ, ಇದರಿಂದಾಗಿ ವಾನರ ಜನಾಂಗವೇ. ಗೌರವಿಸಲ್ಪಟ್ಟಿತು. ನಾವೆಲ್ಲ ಕೃತಾರ್ಥರಾದೆವು.

ಶ್ರೀರಾಮಃ- ಸುಗ್ರೀವ, ನಿಮ್ಮ ಸಂತೋಷವೇ ನಮ್ಮ ಸಂಪತ್ತು. ಉತ್ಸಾಹವೇ ಪರಮ ಸಾಧನ; ಪ್ರೀತಿಯೇ ಮಹಾ ಶಕ್ತಿ ಈಗ ನಾವು ಸೇನಾಸಹಿತ ದಂಡಯಾತ್ರೆ ಕೈಗೊಳ್ಳಬೇಕಾಗಿದೆ. ಆಬಗ್ಗೆ ಹೇಗೆ ಸಿದ್ಧತೆ ನಡೆಸೋಣ?

ಕರಿ ತುರಗ ರಥ ಪಾದಚಾರಿಗಳು ತಾವೆ ವಾನರರೊಬ್ಬರೋಗಾಯ್ತು ಚತುರಂಗಬಲ। ಮರುದಿವಸ ಮಾರ್ಗಶಿರ ಶುದ್ಧಾಷ್ಟಮಿಯೊಳೆಲ್ಲ ಹೊರಪಯಣ ಮಂಗೈದರು||

ಸುಗ್ರೀವ: -- ದೇವ,ವಿಪುಲವಾದ ನಮ್ಮ ಸೇನೆಗೆ ಅಗ್ನಿ ಪುತ್ರನಾದ ನೀಲನನ್ನು ಪ್ರಧಾನ ಸೇನಾಪತಿಯಾಗಿ ನೇಮಿಸೋಣ ಸೇನೆಯ ರಕ್ಷಣಾ ಜವಾಬ್ದಾರಿ ವಾಲಿ ಪುತ್ರನಾದ ಅಂಗದನಿಗಿರಲಿ. ನಿಮ್ಮುಭಯರ ಪಾದಸೇವಾ ಕಾರ್ಯಕ್ಕೆ ಮುಖ್ಯ ಪ್ರಾಣನನ್ನು ನಿಯೋಜಿಸುತ್ತೇನೆ. ಕಾಲಕಾಲಕ್ಕೆ ಯೋಗ್ಯ ಸಲಹೆ ಸೂಚಿಸುವ ಹೊಣೆಗಾರಿಕೆ ಹಿರಿಯರಾದ ಜಾಂಬವರಿಗಿರಲಿ. ಆಗದೇ?

ಶ್ರೀರಾಮಃ-- ಮಿತ್ರಾ, ಅಗೋ ಸಮಯಕ್ಕೆ ಸರಿಯಾಗಿ ದೇವ ಮುನಿಗಳ ನೇಕರು ಆಗಮಿಸಿದ್ದಾರೆ. ಅವರ ಅಭಿಮತದಂತೆ ಶುಭಲಗ್ನದಲ್ಲಿ ನೀಲನಿಗೆ ಸೇನಾ ಪತಿ ಪಟ್ಟಗಟ್ಟಿದಂತಾಯಿತು. ದೇವಗುರುಗಳ ಸೂಚನೆಯಂತೆ ಮಾರ್ಗಶೀರ್ಷ ಮಾಸದ ಶುಕ್ಲ ಅಷ್ಟಮಿ ಉತ್ತರಫಲ್ಗುಣ ನಕ್ಷತ್ರದ ಅಭಿಜಿನ್ಮುಹೂರ್ತದಲ್ಲಿ ನಮ್ಮ ದಂಡಯಾತ್ರೆ ಆರಂಭವಾಗುವಂತೆ ಏರ್ಪಾಡು ಮಾಡು.

ಸುಗ್ರೀವ : -- ದೇವಾ, ನೀವಿಬ್ಬರು ಪಾದಚಾರಿಗಳಾಗಿ ಸಾಗಬಾರದು. ನೀವು ಮರುತ್ಸುತನ,ಲಕ್ಷ್ಮಣದೇವನು ಅಂಗದನ ಹೆಗಲ ಮೇಲೆಕುಳಿತು ಮುಂದೆ ಸಾಗಬೇಕು.ನಮ್ಮ ಸೇನೆಯಲ್ಲಿ ಕರಡಿಗಳೇ ಆನೆಗಳು. ಮುಸುವಗಳೇ ತುರಗಗಳು. ಕರಿಯ ಕಪಿಗಳೇ ರಥಗಳು. ಉಳಿದ ತರುಚರರು ಪದಾತಿಗಳು. ಈರೀತಿಯ ನೂತನ ಚತುರಂಗ ಬಲದೊಡನೆ ದೇವರ ದಂಡಯಾತ್ರೆ ಹೊರಡಲಿ.

ರಾಗ--ಕೇತಾರಗೌಳ -- ಅಷ್ಟತಾಳ

ವರಶ್ರವಣಾದ್ರಿಯಿಂದೆದ್ದು ಬಂದಾ ಹರ ||| ಗಿರಿಯೊಳು ನೆಲಸಿದರು ||
ಮರುದಿನ ಮೇಚಕ ಪರ್ವತದಿಂದೆದ್ದು | ಬರುತಿರ್ದುದು ಕಟಕ ||

ಸುಗ್ರೀವಃ-- ದೇವ, ನಮ್ಮ ಅಪೇಕ್ಷೆಯಂತೆ ನೀಲನ ಅಜ್ಞೆಯಿಂದ ಶುಭ ಮುಹೂರ್ತದಲ್ಲಿ ಶ್ರವಣಾದ್ರಿಯಿಂದ ಹೊರಟ ನಮ್ಮ ಸೇನೆಯನ್ನು ಪರಿಶೀಲಿ ಸೋಣಾಗಲಿ. ವಾನರರ ತೋಳುಗಳೇ ಪರಿಘಗಳು. ಲಾಂಗೂಲವೇ ಸಬಳಗಳು. ಹರಿತವಾದ ಉಗುರುಗಳೇ ಕತ್ತಿಗಳು. ಹಲ್ಲುಗಳೇ ಕೃಪಾಣಗಳು. ಗಿರಿ ಮರಗಳೇ ಇನ್ನಿತರ ಆಯುಧಗಳು.ಇಂತಿರುವ ಸೇನಾ ಶರಧಿಮುಂದೊತ್ತುತ್ತಿರುವಾಗ್ಗ,ಮೇರು ಗಿರಿಯ ಕೀಲು ಕಳಚುವುದೋ, ಅಷ್ಟದಿಕ್ಕುಗಳಿಗೂ ಅಂಬರಕ್ಕೂ ಹಾಕಿದ ಹೊ ಲಿಗೆ ಹರಿಯುವುದೋ, ಭೂಮಿಗೂ ಆಗಸಕ್ಕೂ ಹಾಕಿದ್ದ ಬೆಸುಗೆ ಬಿಡುವುದೋ ಎಂಬ ಭಯವಾಗುತ್ತಿದೆ. ಸೇನಾಪದಧೂಳಿಯಿಂದ ನಡು ಹಗಲಲ್ಲಿ ಕತ್ತಲಾಗು

ವುದೋ ಎಂಬ ಭ್ರಮೆಯಾಗುತ್ತಿದೆ. ಈ ರೀತಿ ಭಯೋತ್ಪಾದಿಸುತ್ತಾ ಬಂದ ನಮ್ಮ ಸೇನೆ ಸಂಜೆ ಸಮಯಕ್ಕೆ ಹರಗಿರಿಯನ್ನು ತಲುಪಿದೆ ಮರುದಿನ ಅಲ್ಲಿಂದ ಹೊರಟ ಸೇನೆ ಮುಂದರಿದು, ಸಂಜೆಗೆ ಮೇಚಕ ಪರ್ವತ ಸೇರಿರುವುದು.

ಅಲ್ಲಿಂದ ಮಲಯಾಚಲಕ್ಕಾಗಿ ದಿನ ನಾಲ್ಕ । ರಲ್ಲಿ ಸಾಗರ ತಡಿಗೆ ||
ಎಲ್ಲರು ಬಂದುದ ಕಾಣುತೋಡಿದರು ಮತ್ತಲ್ಲಿಹ ದಾನವರು ॥ ೨ ||

ಸುಗ್ರೀವ :–ಮೂರನೇ ದಿನ ನಮ್ಮ ದಂಡು ಮುಂದರಿದು ಬಂದು ಮಲಯಾಚಲದ ತಪ್ಪಲಲ್ಲಿ ವಿಶ್ರಾಂತಿ ಅನುಭವಿಸಿದೆ. ಮೂರು ದಿನಗಳ ಎಡೆಬಿಡದ ಪಯಣದಿಂದ ನಮ್ಮ ಸೇನೆಯು ಸ್ವಲ್ಪವೂ ಆಯಾಸಗೊಂಡಿಲ್ಲ; ಉತ್ಸಾಹ ಗುಂದಿಲ್ಲ. ನಾಲ್ಕನೆಯ ದಿನ ಸಂಜೆಗೆ ಸರಿಯಾಗಿ ನಮ್ಮಿ ಸೇನೆ ಲವಣ ಶರಧಿಯ ತಡಿಯನ್ನು ಸೇರಿದೆ. ದೇವಾ, ಅದೋ ನೋಡಿರಿ. ಮುಂದೆ ಕಾಣುವುದೇ ಶತ ಯೋಜನ ವಿಸ್ತಾರವಾದ ಮಹಾಸಾಗರ. ಏನು ಸಡಗರ! ಏನು ಸಂಭ್ರಮ! ತೆರೆಗಳೆಂಬ ಗುಡಿ ಗೋಪುರಗಳಿಂದ ನೊರೆಯೆಂಬ ಶ್ವೇತಛತ್ರವನ್ನು ಬಿಡಿಸಿ, ತುಂತುರು ಹನಿಗಳೆಂಬ ಚಾಮರ ಬೀಸುತ್ತಾ ನೀರಿನ ಸುಳಿಗಳೆಂಬ ನರ್ತನದಿಂದ ಘುಳುಘುಳು ನಿನಾದದ ಭೇರಿ ಬಾರಿಸುತ್ತಾ ನಮ್ಮಿ ಸೇನೆಯನ್ನು ಇದಿರುಗೊಳ್ಳುವಂತೆ ಭಾಸವಾಗುತ್ತಿರುವುದು. ದೇವಾ, ಹತ್ತಿರವ ಗಂಧಮಾದನಗಿರಿಯ ತಪ್ಪಲಲ್ಲಿ ನಮ್ಮ ಸೇನೆಗೆ ಗುಡಿ ಬಿಡಾರ ನಿರ್ಮಿಸುವುದು ಉತ್ತಮ. ಆ ರೀತಿ ಆಜ್ಞೆಯಾಗಲಿ.

ಶ್ರೀರಾಮ:-ಮಿತ್ರಾ, ಬಹಳ ಸಂತೋಷ. ಹಾಗೆಯೇ ಆಗಲಿ.

ವಾರ್ಧಕ

ದಾಳಿವರಿದೈತಂದು ಗಂಧಮಾದನ ಗಿರಿಯ । ಮೂಲದೆಡೆಯಲಿ ರಾಮ ಸೈನ್ಯಮಂ ಕೆದರೆ ಕಪಿ | ಪಾಳಯವ ಕಂಡಂಜಿ ಕಾವಲಿಹ ರಾಕ್ಷಸರು ಬೀಳು ತೇಳುತ ನಡೆದರು ॥

ರಕ್ಕಸ ಕಾವಲುಗಾರರು :-ಓಹೋಹೋ ಇದೇನಪ್ಪ ಅದ್ಭುತ! ಆಶ್ಚರ್ಯ ಆಶ್ಚರ್ಯ! ಸಮುದ್ರದ ಬಳಿಯಲ್ಲಿಯೇ ಇನ್ನೊಂದು ಸಮುದ್ರದ ಉದಯ. ಆದರೆ ಜಲ ಸಮುದ್ರವಲ್ಲ; ಜನ ಸಮುದ್ರ! ಕರಡಿಗಳು, ಮುಸುವಗಳು, ಕೋಡಗಗಳು, ಸಿಂಗಳೀಕಗಳು. ಎಲ್ಲವೂ ಲಕ್ಷ, ಕೋಟಿ ಸಂಖ್ಯೆಯಲ್ಲಿ.

ಕಂಡರೆ ಕಣ್ಣು ಹಾರುತ್ತಿದೆ. ಎಣಿಸಿದರೆ ಎದೆಯೊಡೆಯುತ್ತಿದೆ. ಭಯದಿಂದ ಬಾಯಾರುತ್ತದೆ. ಇದನ್ನೆಲ್ಲ ಕಂಡು ಸುಮ್ಮನಿರುವುದು ಸರಿಯಲ್ಲ. ಪ್ರಭುವಿಗೆ ವರದಿ ಒಪ್ಪಿಸೋಣ.

ಓಲಗದೊಳಿರುವ ದಶಕಂಠನಂಘ್ರಿಗೆ ಮಣಿದು ।ನಾಲಗೆಯ ತಡವರಿಸು ತಂಜುತಳುಕುತ ಬೆದರಿ ; ದಾಲಿಗಳ ನೀರೊರಸಿ ಗದ್ಗದ ಸ್ವರದಿಂದ ಪೇಳಿದರು ದನುಜೇಂದ್ರಗೆ ||

ರಾವಣ:- ದೈನಂದಿನ ಕಾರ್ಯಕ್ರಮದಂತೆ ನಿತ್ಯಕರ್ಮ ನಿರ್ವಹಿಸಿ, ಕಾಲಕ್ಕೆ ಸರಿಯಾಗಿ ಓಲಗಕ್ಕೆ ಬಂದಿದ್ದೇನೆ. ಸಾವಿರ ಸಂಖ್ಯೆಯ ಪುತ್ರರೂ, ಅಯುತ ಸಂಖ್ಯೆಯ ಭೃತ್ಯರೂ, ದಂಡನಾಯಕರೂ ಮಾಂಡಲಿಕರೂ ಮಂತ್ರಿ ಪುರೋಹಿತರೂ ಎಂದಿನಂತೆ ಸಭೆಯಲ್ಲಿ ನೆರೆದಿದ್ದಾರೆ. ವಂದಿಮಾಗಧರು ತಮ್ಮ ಕರ್ತವ್ಯ ನಿರತರಾಗಿದ್ದಾರೆ. ಸಂತೋಷ. ಆದರೆ ನಾವು ತಂದಂಗನೆಯಪತಿ ರಾಮನ ದೂತ ಬಂದು ಲಂಕೆಯನ್ನು ದಹಿಸಿ ಹೋದನಂತರ ಲಂಕಾ ನಿವಾಸಿಗಳಲ್ಲಿ ಒಂದು ತರದ ಭೀತಿ ತಲೆದೋರಿದೆ. ಅದರ ನಿವಾರಣೆಗಾಗಿ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕಾಗಿದೆ. ರಾಮನ ವಿಚಾರವಾಗಿ ದಿನ ದಿನವೂ ವಾರ್ತೆ ಸಂಗ್ರಹಿಸುತಿದ್ದೇವೆ. ಏನಾದರೂ ಹೊಸ ವಾರ್ತೆ ಇದ್ದರೆ, ದೂತರು ಬಂದು ತಿಳಿಸಿಯಾರು; ನೋಡೋಣ

ಕಾವಲು:- ರಾವಣೇಶ್ವರ ಮಹಾಪ್ರಭುಗಳಿಗೆ ಜಯವಾಗಲಿ. ಪಾದಕ್ಕೆ ಬಿದ್ದೆವು ಬುದ್ಧಿ.

ರಾವಣ:- ಎದ್ದೇಳಿರಿ, ಏನು ವಿಶೇಷ?

ಕಾವಲು:- ಕಂಡರೆ ತಿಳಿಯೋಕಿಲ್ವೆ ಬುದ್ಧಿ. ಗಾಬರಿ! ಗಾಬರಿ! ಮನದಲ್ಲಿ ಗಡಿಬಿಡಿ; ಎದೆಯಲ್ಲಿ ಡಡಬಡ. ದೇವ್ರೆ, ಬೆದರಿ ಬಾಯಾರೈತೆ. ನಾಲಗೆ ಮಗಚೋಕಿಲ್ಲ

ರಾವಣ:-ಅಭಯ ನೀಡಿದ್ದೇನೆ, ಸರಿಯಾಗಿ ಹೇಳಿರಿ.

ರಾಗ-ಕಾಂಬೋಧಿ-ಅಷ್ಟ

ಪಂಡು ಬಂತಯ್ಯ ರಾಘವನ । ನಾವು । ಕಂಡೆವು ದಳವಾಯಿ ಸುಗ್ರೀವನ ತಂಡ ತಂಡದೊಳೆಪ್ಪತ್ತೇಳು ಕೋಟಿ ಮಂದಿ । ತುಂಡು । ಮರಗಳ । ಗುಂಡುಗಿರಿಗಳ । ಹಿಂಡು ಹಿಂಡಿನ ಕಪಿಗಳು ||೧||

ಕಾವಲು:- ಮಹಾಪ್ರಭು, ಸಮುದ್ರದ ಉತ್ತರ ತಡಿಯಲ್ಲಿ ಮತ್ತೊಂದು

ಸನುವ್ರ ಬಂದಿಳಿದಿದೆ. ಅದು ಸೇನಾ ಸಮುದ್ರ. ದೇವರು ಎಳತಂದ ಸೀತೆಯ ಗಂಡನ ದಂಡಂತೆ. ಆ ಸೇನೆಗೆ ಸುಗ್ರೀವ ಒಡೆಯನಂತೆ. ಎತ್ತ ನೋಡಿದಡತ್ತ ಅವರದೇ ದಳ, ಅವರದೇ ಬಲ. ತಂಡ ತಂಡವಾಗಿ ಬಂದ ಅವರು ಎಪ್ಪತ್ತೇಳು ಕೋಟಿ ಇದಾರಂತೆ. ಕಾಮರೂಪಿಗಳಂತೆ. ಇಂದ್ರಾದಿಗಳಿಗಿಂತ ಬಲಿಷ್ಠರಂತೆ. ಕೈಯಲ್ಲಿ ಕಲ್ಲು ಗುಂಡು; ಮರದ ದಿಂಡು, ಗಿರಿ ಗುಡ್ಡ ಧರಿಸಿಕೊಂಡವ್ರೆ. ನಮ್ಮ ಪಟ್ಟಣ ಸುಟ್ಟವನಂಥ ಕೋಟಿ ಕೋಟಿ ಕಪಿಗಳ್ಳಿದಾರೆ ಬುದ್ಧಿ. ಅಷ್ಟೇ ಅಲ್ಲ—

ಕರಿರಥ ತುರಗವು ತಾವೆ। ಪಾದ। ಚರಿಗಳನ್ನವರೊಳ್ಳೈದಾವೆ॥ ಕರಡಿ ಸಿಂಗಲಿಕ ವಾನರ ಮುಸು ಕೆಂಚಣಿಲ್ | ಮರಿಗಳೈದವೆ ಕೆಲವು ಕರಿದಾ। ಗಿರುವ ಮುದಿ ಮುದಿ ಕಪಿಗಳು ॥೨।.

ಕಾವಲು:— ಆ ಸೇನೆಯಲ್ಲಿ ಆನೆ, ಕುದುರೆ, ರಥ, ಪದಾತಿಗಳೆಂಬುದೇನೂ ಕಾಣೊಲ್ಲ. ಅವರೆ ಕರಡಿಗಳೇ ಆನೆ.ಮುಸುವಗಳೇ ಕುದುರೆ. ಇನ್ನೇನೊ ರಥವಂತೆ. ಪಾದಚಾರಿಗಳೇ ಪದಾತಿಗಳು. ಕರಡಿ; ಮುಸುವ ಸಿಂಗಲೀಕ, ಮುಂಗ, ಕೆಂಚಣಿಲು ಇನ್ನೇನೇನೋ ಎಲ್ಲ ಐದಾವೆ ಬುದ್ಧಿ. ಕೆಲವು ಮರಿ, ಕೆಲವು ಮುದಿ ಎಲ್ಲಾ ಬಗೆಯೂ ಐತೆ.

ರಾವಣ:— ಎಲ್ಲವು ಕರಡಿ, ಕಪಿಗಳೆನ್ನುತ್ತೀಯಲ್ಲ ; ಮನುಷ್ಯರೆ ಇಲ್ಲವೇನು?

ದಿನಕರ ವಂಶಲಲಾಮ | ರಾಮ | ನನುಜ ಲಕ್ಷ್ಮಣನು ನಿಸ್ಸೀಮ ‖ ಧನುಶರವನು ಕೊಂಡು ಧನುವ ನೋಡುತಲಿಂದು | ಘನ ಪರಾಕ್ರಮಿ ವೀರ ಸುಗ್ರೀ | ವನ ಮಹಾಬಲ ಕೂಡಿದು ‖ ೩ ‖

ಕಾವಲು:— ಸೂರ್ಯವಂಶಜನಂತೆ ರಾಮ. ಅವನ ತಮ್ಮ ಲಕ್ಷ್ಮಣ ಸಮರ ನಿಸ್ಸೀಮನಂತೆ. ಇವರಿಬ್ಬರೇ ಮಾನವ್ರು. ಅವರ ಕೈಯಲ್ಲಿ ಮಾತ್ರ ಬಿಲ್ಬಾಣಗಳು. ವಾನರ ಸಾಮ್ರಾಟ್ ಸುಗ್ರೀವನೇ ಅವರ ಪ್ರಧಾನ ಸಹಾಯಕನಂತೆ. ಈ ಮಾರ್ಬಲವೆಲ್ಲ ಅವನದಂತೆ. ಅವರಿಗೆ ಸಂಬಳ ಸಾರಿಗೆ ಏನೂ ಇಲ್ಲವಂತೆ. ಅನ್ನಾಹಾರ ಬೇಕಿಲ್ಲವಂತೆ. ಕಾಡಿನ ಹಣ್ಣು ತೋಡಿನ ನೀರು ಅವರಿಗೆ ಸಾಕಂತೆ.

ರಾವಣ:— ಸಾಕು ಮುಚ್ಚು ಬಾಯಿ. ಹುಲು ನೃಪಾಲಕನ ಹೆಗ್ಗಳಿಕೆಯ ಕೋತಿಗಳ ಪಡೆ ಬಂದಿದೆಯೆಂದು ಗಾಬರಿಗೊಂಡು ಬೊಗಳುವಿರೇನು? ತೊಲಗಿಲ್ಲಿಂದ.ನಮ್ಮ ಓಲಗದಲ್ಲಿ ಮಹಾ ಮಾಂಡಲಿಕರು, ಅಪ್ರತಿಮ ವೀರರು, ಅಗ್ರಗಣ್ಯರೆ ನೆರೆದಿರುವಾಗ ನಮ್ಮ ಭೃತ್ಯರು ಆಡುವ ಅಧೀರತೆಯ ಮಾತು ಹಾಸ್ಯಾಸ್ಪದ

ಸಭಿಕರೇ ಕೇಳಿರಿ.

ರಾಗ—ಭೈರವಿ-ತ್ರಿವುಡೆ.

ನೀಲ ನಾಯಕನೆಂಬ ವಾರ್ತೆಯ | ನಾಲಿಸುತ ಖಳ ಕೇಳಿದ || ಕಾಲ ಭೈರವನಂತೆ ರೋಷದ । ಮೇಲೆ ಧೈರ್ಯವ ತಾಳಿದ || ಕಾಳರಕ್ಕಸ ದಿಕ್ತಟದ ಬೇ। ತಾಳರನು ಬರಹೇಳಿದ || ಸಾಲುಸಾಲೀರೇಳು ಲೋಕಕೆ | ಓಲೆ ತಾಳಿಯ ಬರೆಸಿದಾಗಲೆ | ಬಂದರಾಗ | ಖಳರೈ । ತಂದರಾಗ || ೧ ||

ರಾವಣಃ– ನಮ್ಮ ಸುವರ್ಣಲಂಕೆಯ ಮೇಲೆ ದಂಡೆತ್ತಿ ಬಂದವರ ಕುರಿತಾಗಿ ಕಾವಲುಗಾರರ ವರದಿ ಬಂತಲ್ಲ. ರಾಮನ ದಂಡು; ಕೋತಿಗಳ ಹಿಂಡು ಆಯುಧಗಳು ಕಲ್ಲು ಗುಂಡು, ಮರದ ದಿಂಡು; ಸೇನೆಗೆ ನೀಲ ದಳಪತಿಯಂತೆ, ಯಾರೇ ಇರಲಿ, ಯಾರೇ ಬರಲಿ; ಈ ಚತುರ್ದಶ ಭುವನದಲ್ಲಣನಿಗೇನು ಭಯ? ಆದರೆ ರಣಕಕ್ಕಸರೆನಿಸಿದ ಈ ರಕ್ಕಸ ರಾಜ್ಯದ ಮೇಲೆ ಕೈಲಾಗದ ಕೋತಿಗಳು ದಂಡೆತ್ತಿ ಬಂದರೆಂದರೆ ಅಪಹಾಸ್ಯ. ಈ ಪ್ರಕರಣ ಯೋಚಿಸುವಾಗ ರೋಮಕೂಪಗಳಲ್ಲಿ ಕೋಪದ ಕಿಡಿಹಾರುತ್ತಿದೆ. ಆ ಕೋತಿಗಳು ನಮ್ಮ ರಾಜ್ಯದೊಳಗೆ ಕಾಲಿಡಕೂಡದು. ಅದಕ್ಕಾಗಿ ಬೇತಾಳ ಸಮೂಹವನ್ನು ಬರಮಾಡಿ, ಹೊರವಳಯದ ಕಾವಲಿಗೆ ನೇಮಿಸಿದ್ದೇನೆ. ದಿಕ್ಕು ದಿಕ್ಕುಗಳಲ್ಲಿರುವ ಕಾಳರಕ್ಕಸರನ್ನು ಕೋಟಿ ಸಂಖ್ಯೆಯಲ್ಲಿ ಕರೆಸಿದ್ದೇನೆ.

ಕೋಟಿ ದಾನವರುಗಳ ಶರಧಿಯ | ದಾಟದಂದದಿ ನಿಲಿಸಿದ || ಕೋಟೆಗಳ ಹೊರವಳಯ ಸುತ್ತಲು | ನೀಟೆಯಲಿ ಕಣೆಯುಗೆಸಿದ || ಪಾಟಿಯಲಿ ರಣಭೂಮಿಯಗಲಕೆ | ಲೂಟಿಯಂಕವ ಸುಳಿಸಿದ || ಕಾಟಕದ ಕೈಯಸ್ತ್ರ ಶಸ್ತ್ರದ | ಕೋಟಲೆಗೆ ಚಲವೆರಸಿದಾಗಲೆ | ಬಂದರಾಗ | ಖಳರೈ । ತಂದರಾಗ || ೨ ||

ರಾವಣಃ–ಅಪಾರವಾದ ಜಲರಾಶಿಯ ಶರಧಿಯನ್ನು ರಾಮನ ಸೇನೆ ದಾಟದಂತೆ ಆತಂಕಿಸಲಿಕ್ಕಾಗಿ ಕೋಟಿ ಕೋಟಿ ಕಾಳರಕ್ಕಸರನ್ನು ಆಯಕಟ್ಟಿನ ಸ್ಥಳಗಳಲ್ಲಿ ನಿಲ್ಲಿಸಿದ್ದೇನೆ. ರಾಜ್ಯದ ಭದ್ರತೆಗಾಗಿ ನಿರ್ಮಿಸಿದ ಭದ್ರವಾದ ಕೋಟೆಗಳನ್ನು ಮತ್ತಷ್ಟು ಭದ್ರಗೊಳಿಸಿದ್ದೇನೆ. ಆ ಕೋಟೆಗಳ ಸುತ್ತಲು ಆಳ, ಅಗಲವುಳ್ಳ ಕಂದಕ ನಿರ್ಮಿಸಿ, ಮೇಲ್ಮೊಗವಾಗಿ ಶೂಲಾದಿಗಳನ್ನು ನೆಟ್ಟು, ಕಂದಕಗಳಲ್ಲಿ ವಿಷಪೂರಿತ ಜಲವನ್ನು ತುಂಬಿಸಿದ್ದೇನೆ. ಇದೆಲ್ಲವನ್ನು ದಾಟಬಂದದ್ದೇ ಆದರೆ, ಬ್ರಹ್ಮರಕ್ಕಸರ ಭಯಂಕರ ಪಡೆ ತಡೆಯಲು ಸಿದ್ಧವಾಗಿ

ನಿಂತಿದೆ. ಅಪ್ರತಿಮವಾದ ನಮ್ಮಾಯುಧಗಳ ಮುಂದೆ ಆ ಕಲ್ಲು ಗುಂಡು, ಮರದ ತುಂಡು ಯಾವ ಪ್ರಯೋಜನಕ್ಕೆ ಬಂದೀತು. ನೋಡೋಣ.

ಕಂದ.

ಅಂದಿನ ಓಲಗದೆಡೆಗೈ । ತಂದಗ್ರಜನಡಿಗೆರಗಿ ವಿಭೀಷಣದೇವಂ ॥ ಬಂದಾ ರಾಮನ ವಾರ್ತೆಯ । ನಂದರುಹಲು ಕೇಳ್ದು ರಾಜನೀತಿಯ ಪೇಳ್ದಂ ॥೧॥

ವಿಭೀಷಣ:-ಇದೆಲ್ಲ ಕಾಲಗತಿಯೋ ನಮ್ಮ ದುರ್ಬುದ್ಧಿಯೋ ಅರ್ಥವಾಗುವುದಿಲ್ಲ ನಮ್ಮಣ್ಣ ರಾವಣೇಶ್ವರ ದಾನವ ಚಕ್ರವರ್ತಿ ! ಚತುರ್ದಶ ಭುವನವಲ್ಲಭ. ಹತ್ತು ಮುಖಗಳಿಂದ ನಾಲ್ಕು ವೇದ ಆರು ಶಾಸ್ತ್ರಗಳನ್ನು ಏಕ ಕಾಲದಲ್ಲಿ ಓದಿ ತಿಳಿಯ ಬಲ್ಲ ಸರ್ವವಿದ್ಯಾವಿಶಾರದ. ಮೇಲಾದ ಶಿವ ಭಕ್ತಾಗ್ರೇಸರ. ಬ್ರಹ್ಮನಿಂದ ಬೇಕಾದ ವರ ಪಡೆದ ಮಹಾನುಭಾವ. ಅಷ್ಟದಿಕ್ಪಾಲಕರು ಇವನಾಜ್ಞಾ ಧಾರಕರು. ಪ್ರಹ ಸ್ತನಂಥ ಧೀಮಂತ ಮಂತ್ರಿಗಳು. ಮಹೇಂದ್ರನನ್ನು ಕಟ್ಟಿ ತಂದ ಇಂದ್ರಜಿತುವಿ ನಂಥ ಮಕ್ಕಳು. ಇಷ್ಟೆಲ್ಲ ಇದ್ದೂ ಹೀಗಾಗುವುದೆಂದರೆ ?"ಕೆಡುವ ಕಾಲಕ್ಕೆ ಬುದ್ಧಿ ಇಲ್ಲ; ಮರಣ ಕಾಲಕ್ಕೆ ಮದ್ದಿಲ್ಲ " ಎಂಬ ಗಾದೆಯಿದೆ. ಹಾಗಾಯಿತಲ್ಲ. ಹತ್ತು ತಲೆಗಳಿದ್ದರೂ ವಿವೇಚನೆ ಮಾಡುವುದಿಲ್ಲ. ವಿವೇಕ ಉಳಿದಿಲ್ಲ . ಹಾಗಾದರೆ ಮುಂದೇನು ?

ಈ ಪ್ರಾಯದಲ್ಲಿ ಈತನಿಗೆ ಸ್ತ್ರೀ ವ್ಯಾಮೋಹವೇ ? ಶ್ರೀ ರಾಮನ ಪತ್ನಿ ಸೀತೆ ಯನ್ನು ಅಪಹರಿಸಿ ತಂದ. ರಾಮನಿಲ್ಲಿ ಹೇಗೆ ಬಂದಾನು ಎಂದಿದ್ದ. ಆದರೆ ರಾಮ ಬಂದೇ ಬಂದ. ಇಂದೀಗ ವಾರ್ತೆ ಬಂದಿದೆ, ರಾಮನ ಮಹಾಸೇನೆ ಬಂದಿದೆ; ಸಾಗ ರದ ಬಳಿ ನಿಂತಿದೆಯೆಂದು. ಇಲ್ಲಿ ಅಣ್ಣನ ಓಲಗ ನಡೆದಿದೆಯಂತೆ. ಏನು ನಿರ್ಣಯ ವಾಗುವುದೋ ನೋಡೋಣ ಸಭೆಗೆ ಹೋಗುತ್ತೇನೆ. ಅಣ್ಣಾ ಇದೋ ವಂದನೆ.

ರಾವಣ : – ವಿಭೀಷಣ. ಬಾ. ಕುಳಿತುಕೋ. ಈಗ ಸಭಿಕರೆಲ್ಲರೂ ಆಲಿಸ ಬೇಕು. ನಾವು ಈ ಹಿಂದೆ ತಂದಿರುವ ಆ ಸೀತೆಯ ಪತಿ ರಾಮನು ಸುಗ್ರೀವನೆಂಬ ವಾನರನ ಸ್ನೇಹಗಳಿಸಿ, ಅವನ ಮರ್ಕಟ ಸೇನೆಯೊಡನೆ ನಮ್ಮ ಮೇಲೆ ದಂಡೆತ್ತಿ ಬಂದಿರುವನಂತೆ. ಈ ವಿಚಾರವಲ್ಲಿ ನಾವೇನು ಮಾಡಬೇಕು ಎಂಬ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಬೇಕು.

ರಾಗ- ಬೇಗಡೆ- ಅಷ್ಟತಾಳ.

ಕೇಳಿದೆಯ । ಅಣ್ಣ । ಕೇಳಿದೆಯ ॥ ಪಲ್ಲ ॥ ರಾಮ । ಪಾಳ್ಯಗೂಡಿ ನವೊದನೆಕಾಳಗಕ್ಕೆ ಬಂದ ಪರಿಯ ॥ ಕೇಳಿದೆಯ ॥ ಅ. ಪ. ॥

ವಿಭೀ:- ಅಗ್ರಜ, ಆಲಿಸಬೇಕು, ಇಂದು ರಾಮ ಬಂದ ವಾರ್ತೆಕೇಳಿದೆಯ? ಅಯೋಧ್ಯೆಯ ಅರಸು ಕುಮಾರನಾಗಿದ್ದರೂ, ವನವಾಸಿಯಾಗಿದ್ದ ರಾಮ ಅಸಹಾಯಕನಾಗಿದ್ದ; ತನ್ನ ಪತ್ನಿಯ ಅಪಹಾರದ ಕಾರಣ ಕಂಗೆಟ್ಟು, ವ್ಯಥೆಯಿಂದ ಬಳಲಿ ಬುದ್ಧಿಗೆಟ್ಟು ಹೋಗುವನೆಂದು ಭಾವಿಸಿದವರು ಹಲವರು. ಆದರೆ ಆ ರಾಮ ವಾನರ ಜನಾಂಗದ ಸ್ನೇಹ ಸಂಪಾದಿಸಿ, ವಾನರ ಸೇನೆಯೊಂದಿಗೆ ದಂಡೆತ್ತಿ ಬಂದು, ಸಿಂಧುವಿನ ಬಳಿನಿಂದಿರುವ ವಾರ್ತೆ ಬಂದಿತಲ್ಲ ! ಅವರ ಆಕಾರ ಆಹಾರ ಇತ್ಯಾದಿ ವಿಚಾರ ಕೇಳಿರುವೆಯಾ?

ಬಾಲವುಳ್ಳ ಕಪಿಗಳೆಪ್ಪ । ತ್ತೇಳು ಕೋಟಿಯಂತೆ ಕೆಲವು । ನೀಲ ಕೆಂಪು ಬಿಳಿದು ಮತ್ತೆ । ಬಾಲಕರಂತೆ ॥ ಮೇಲೆ ಸುಗ್ರೀವನೆಂಬಾತ । ಪಾಲಿಸುವನರಸನಂತೆ । ನೀಲನೆಂಬವನಿವರಿಗೆಲ್ಲ । ಪಾಳ್ಯದ ನಾಯಕನಂತೆ ॥ ೧ ॥

ವಿಭೀ:- ಅಣ್ಣ, ಆ ವಾನರರು ದಾನವರಾದ ನಮ್ಮಂತಲ್ಲ; ಮಾನವರಂತೆಯೂ ಅಲ್ಲ. ಅವರಿಗೆಲ್ಲ ಹಿಂದೆ ಬಾಲವಿದೆಯಂತೆ. ಮೈತುಂಬಾ ರೋಮವಂತೆ. ಇಂತಹ ಕಪಿಗಳು ಒಂದೆರಡಲ್ಲವಂತೆ. ಎಪ್ಪತ್ತೇಳು ಕೋಟಿಗಳಂತೆ. ಹದಿನೆಂಟು ಅರ್ಬುದ ವಾನರರಂತೆ. ಎಲ್ಲವೂ ಒಂದೇ ವರ್ಣದವುಗಳಲ್ಲವಂತೆ. ನೀಲ, ಕೆಂಪು, ಬಿಳಿ ಮೊದಲಾದ ಬಣ್ಣಗಳಂತೆ. ಅವರಿಗೆಲ್ಲ ಸುಗ್ರೀವ ಮಹಾರಾಜನಂತೆ ನೀಲನೆಂಬವ ಸೇನಾಪತಿಯಂತೆ. ಇವರೆಲ್ಲ ಕಾಮರೂಪಿಗಳಂತೆ. ಭೀಮಕಾಯರಂತೆ. ಪರಮ ಶೂರರಂತೆ. ಶೌರ್ಯ ಸಾಹಸಿಗಳಂತೆ.

ರಾವಣ:-- ಈ ಅಂತೆಯ ಕಂತೆಗಳನ್ನೆಲ್ಲ ಸಂಗ್ರಹಿಸಿ ತಂದು ಇಲ್ಲೇಕೆ ನಮ್ಮಿದಿರು ಹಂಚುತ್ತಿರುವೆ? ವಾನರ ಸೇನೆ ಬಂದಿರುವ ವಾರ್ತೆ ನಮಗೂ ಬಂದಿದೆ. ಈಗೇನು ಮಾಡಬೇಕು ಎಂಬುದೇ ಪ್ರಶ್ನೆ

ರಾಗ- ಯರಕಲ ಕಾಂಬೋಧಿ- ಅಷ್ಟ

ಇನ್ನಾದರು ಬಿಡು ಬಿಡು ನಿನ್ನ ಛಲವ । ಮೊನ್ನೆ ಹೇಳಿದ ಮಾತು ನಿಜವಾಯಿತಲ್ಲ ॥ ಪಲ್ಲ ॥

ವಿಭೀ:- ಅಣ್ಣ, ನೀನೇನೂ ತಿಳಿಯದವನಲ್ಲ. ಇಹದ ಹಾಗೂ ಪರದ

ಸುಖಕ್ಕೆ ಸಾಧನವಾದ ಧರ್ಮ, ಅರ್ಥ, ಕಾಮಗಳ ಮರ್ಮವನ್ನೂ ತಿಳಿಸನೆ.ರಾಜಕೀಯ ವ್ಯವಹಾರದ ಸಾಮದಾನ ಭೇದ ದಂಡಗಳೆಂಬ ಚತುರೋಪಾಯಗಳನ್ನೂ ಸಂಧಿ, ವಿಗ್ರಹ, ಯಾನ, ದ್ವೈಧೀಭಾವ, ಸಮಾಶ್ರಯಗಳೆಲ್ಲವನ್ನೂ ಚೆನ್ನಾಗಿ ತಿಳಿದಿರುವೆ ವಿಷಯದ ಪರಿಜ್ಞಾನವಿದ್ದೂ ಬರಿದೇಕೆ ಛಲಮಾಡುತ್ತಿರುವೆ? ವಸ್ತು ಸ್ಥಿತಿಗೆ ವಿರುದ್ಧವಾಗಿ ಮಾಡುವ ಛಲವು ಇಚ್ಛಿತ ಫಲನೀಡಲಾರದು ಹಿಂದೆ ಹೇಳಿದವರ ಹಿತವಚನಗಳನ್ನು ನೀನು ನಿರಾಕರಿಸಿದೆ. ಅಂದು ಅವರ ಹೇಳಿದ ಮಾತು ಈಗ ನಿಜವಾಯಿತಲ್ಲ! ಈ ಛಲ ಸಲ್ಲದು; ಇನ್ನಾದರೂ ನಿನ್ನ ಛಲ ಬಿಟ್ಟು ಬಿಡು.

ರಾವಣಃ– ವಿಭೀಷಣ, ನಮ್ಮ ಯೋಗ್ಯತೆ, ಶೌರ್ಯ, ಧೈರ್ಯ, ಸಾಹಸ, ಪರಾಕ್ರಮಗಳನ್ನರಿತೂ ಅರಿಯದವರಂತೇಕೆ ಮಾತಾಡುತ್ತಿರುವೆ? ಚತುರ್ದಶ ಭುವನನಲ್ಲಣ, ಛಲದಂಕಮಲ್ಲ, ಈ ದಾನವ ಚಕ್ರೇಶ್ವರ ಯಾರಿಗೆ ಹೆದರಿ ಛಲ ಬಿಡಬೇಕು? ಯಾಕೆ ಬಿಡಬೇಕು? ಆ ಕಪಿಗಳಿಂದೇನಾದೀತು?

ವಿಭೀಃ— ಅಣ್ಣಾ, ಅದನ್ನೇ ಹೇಳುತ್ತೇನೆ ಕೇಳು.

ಮೊದಲು ಪಟ್ಟಣವನಗ್ನಿಗೆ ಕೊಟ್ಟ ಕಪಿಯಂಥ । ಅದುಭುತ ವೀರ ವಾನರ ಸೈನ್ಯ । ದಂ ಕೂಡಿ । ಕೆದರಿತು ಪಾಳ್ಯವಂತೆ ॥ ಈಚೆಗೆ ದಾಟುವುದಕೆ ಈ ವೇಳ್ಯವಂತೆ ॥ ಎಚ್ಚರಿತುಕೊಂಬುದಕೆ ಸಮಯವು ಬಂದಿದೆ ಮುನ್ನಿನಂತೆ ॥ ಇನ್ನಾ ॥ ೧ ॥

ವಿಭೀಃ— ಪ್ರಭೂ, ಸೀತಾಪಹಾರದ ನಂತರ ಈ ದುರ್ಗಮವಾದ ಲಂಕೆಗೆ ಸೀತಾನ್ವೇಷಣೆಗಾಗಿ ಬಂದವನು ಒಬ್ಬ ಕಪಿ ಬಂದವನೇ ಲಂಕಾಧಿದೇವತೆಯೆನಿಸಿದ ಲಂಕಿಣಿಯನ್ನು ಲೀಲಾಜಾಲವಾಗಿ ವಧಿಸಿದ. ಆ ಮೇಲೆ ಬಲಿಷ್ಠನಾದ ಜಂಬುಮಾಲಿಯ ರಕ್ಷಣೆಗೊಳಗಾಗಿದ್ದ ಅಶೋಕವನವನ್ನು ನಾಶಮಾಡಿದ. ಆ ದಿನ ಆ ಕಪಿ ಮಾಡಿದ್ದು ವನಭಂಗವಲ್ಲ; ರಾಕ್ಷಸ ಚಕ್ರವರ್ತಿಯಾದ ನಿನ್ನ ಮಾನಭಂಗ. ನಂತರ ಅದಮ್ಯವೀರರಾದ ಅಕ್ಷಯ ಕುಮಾರರನ್ನೆಲ್ಲ ವಧಿಸಿದ. ದೇವತೆಗಳಿಗೂ ಭಯಪ್ರದವಾಗಿದ್ದ ಈ ಸಭೆಯಲ್ಲಿ ನಿರ್ಭಯವಾಗಿ ಖಂಡಿಸಿದ. ನಮ್ಮ ಸುವರ್ಣ ಲಂಕೆಯನ್ನು ದಹಿಸಿ ನಿರಾತಂಕವಾಗಿ ಹಿಂದೆ ಹೋದ. ಈಗ ಅವನಂತಹ ಕೋಟಿ ಕೋಟಿ ವಾನರ ಸೇನೆ ಬಂದಿದೆಯಂತೆ. ಅವರಾದರೂ

ವೇತನದ ಭಟರಲ್ಲ. ಅನ್ನಾಹಾರದ ಅಗತ್ಯ ಅವರಿಗಿಲ್ಲ ಸಾಮದಾನ ಭೇದದಂಡ ಗಳಿಗೆ ಮಣಿಯುವವರಲ್ಲ. ಇನ್ನೇನು, ಸಾಗರ ದಾಟುವ ಸನ್ನಾಹದಲ್ಲಿರುವರಂತೆ. ಇನ್ನೂ ನಾವು ನಮ್ಮ ಹಿಂದಿನ ಸಾಹಸದ ಅಮಲಿನಲ್ಲಿರುವುದುಚಿತವಲ್ಲ. ಎಚ್ಚರಗೊಳ್ಳಬೇಕಾದ ಕಾಲ ಬಂದಿದೆ. ಸಾಗರ ದಾಟಿ ಲಂಕೆಗೆ ಬಾದರೆಂದರೆ ಮುಂದೆ ವಿನಾಶ ತಪ್ಪಿದ್ದಲ್ಲ. ಇದೆಲ್ಲ ಕಪಿಗಳ ವಿಚಾರವಾಯಿತು. ಇನ್ನು ರಾಮಚಂದ್ರನ ವಿಚಾರ ಕೇಳು.

ಅಣ್ಣ ಕೇಳೀ ರಾಮಚಂದ್ರನು ಭೂಮಿಯು | ತಿಣ್ಣ ವಿಳುಹಲಾಗಿ ಅವತರಿಸಿದನೊಂದು | ಹೆಣ್ಣ ನೆವನ ಹಿಡಿದು || ನಮ್ಮೆಲ್ಲರ | ಮಣ್ಣಿಗಿಕ್ಕುವ ಬಡಿದು|| ಈ ಕಾರ್ಯದೊ | ಉಣ್ಣ ದುರಿವುದುಚಿತಗಳಲ್ಲ ತಿಳಿದು || ಇನ್ನಾ || ೨ ||

ವಿಭೀ:– ಅಣ್ಣ, ರಾಮಚಂದ್ರನು ಸಾಮಾನ್ಯ ಮಾನವನೆಂದು ತಿಳಿಯ ಬೇಡ. ಭೂಭಾರ ಹರಣಾರ್ಥವಾಗಿ ಅವತರಿಸಿದ ಮಹಾಶಕ್ತಿ; ಅರ್ಥಾತ್ ಶ್ರೀಮನ್ನಾರಾಯಣ. ಹೆಣ್ಣಿನ ನೆವನದಿಂದ ನಮ್ಮನ್ನೆಲ್ಲ ಮಣ್ಣುಗೂಡಿಸಲೆಂದು ಬಂದವ. ಹಾಗಿರುವಾಗ ಉಣ್ಣದೆ ತಿನ್ನದೆ, ಉರಿದು ಸಾಯಬೇಕೇಕೆ? ಆ ರಾಮ ಮಾನವನಲ್ಲ; ವಾನರರು ಮೃಗಗಳಲ್ಲ; ಇದೆಲ್ಲ ಲೋಕ ಕಂಟಕರನ್ನು ನಾಶಗೊಳಿಸಲು ಒಡ್ಡಿದ ಬೀಸುಬಲೆ.

ರಾವಣ:– ವಿಭೀಷಣ, ಇದೆಲ್ಲ ನಿನ್ನ ಕಲ್ಪನೆಯ ಕಥೆ. ಇದಕ್ಕೆ ಬೆಲೆ ಕೊಡಲಾರೆ. ಆ ದಶರಥನ ಮಗ ನಿನಗೆ ದೇವರಾಗಿರಬಹುದು. ಆ ಕಾಡಕಪಿಗಳು ನಿನಗಿನ್ನೇನೋ ಆಗಿ ತೋರಬಹುದು. ಆದರೆ ನಮ್ಮಲ್ಲಿರುವ ಅನೇಕ ರಕ್ಕಸರಿಗೆ ಅವರೆಲ್ಲ ಆಹಾರ ವಸ್ತುಗಳು. ಸುಮ್ಮಗೆ ಬೆದರುಗೊಂಬೆ ತೋರಿಸಿ ಹಕ್ಕಿಯೋಡಿಸಬಹುದೇ ಹೊರತು, ವಿಕ್ರಮಿಗಳನ್ನೋಡಿಸಲು ಶಕ್ಯವಲ್ಲ.

ವಿಭೀ:— ನನ್ನ ಮಾತು ಬೆದರುಗೊಂಬೆಯೇನು? ನಿರ್ವಿಕಾರ ಚಿತ್ತದಿಂದ ವಿಚಾರಿಸಿದೆಯೆಂದರೆ ನನ್ನ ಮಾತಿನ ಸತ್ಯತೆ ತಿಳಿಯದಿರದು. ನೀನಾದರೂ ಕೈಲಾಸ ಪರ್ವತವನ್ನೇ ಬಾಹುಬಲದಿಂದ ಎತ್ತಿ ಅಲುಗಾಡಿಸಿದ ಲೋಕೋತ್ತರ ಬಲಶಾಲಿಯಾಗಿರುವೆ. ಆದಾಗ್ಯೂ ಜನಕರಾಜನಲ್ಲಿದ್ದ ಹರಧನುವನ್ನೆತ್ತಲಾರದೆ ಹೋದೆ. ಅದೇ ಧನುವನ್ನು ಸಮಸ್ತರಿದಿರು ಲೀಲಾಜಾಲವಾಗಿ ಆ ರಾಮನೆತ್ತಿದ. ಹತ್ತು ಸಾವಿರ ಆನೆಗಳ ಬಲವಿದ್ದ ತಾಟಕಿಯನ್ನು ಒಂದೇ ಬಾಣದಿಂದ ಕೊಂದು ಕೆಡಹಿದ.

ಸುಬಾಹು ಮೊದಲಾದ ಸಹಸ್ರ ಸಂಖ್ಯೆಯ ದಾನವರನ್ನು ಸಂಹರಿಸಿ. ನಮ್ಮ ಮಾವ ಮಾಯಾ ವಿದ್ಯಾ ವಿಶಾರದ ಮಾರೀಚನ ಗತಿಯೇನಾಯಿತು? ಖರ, ದೂಷಣ, ತ್ರಿಶಿರರೇನು ಸಾಮಾನ್ಯರೇ? ನಮ್ಮ ಶೂರ್ಪನಖಿಯೇನಾದರೂ ಸಾಮಾನ್ಯಳೇ? ತನ್ನ ಬಾಹುಬಲದಿಂದ ನಿನ್ನ ಶೌರ್ಯವನ್ನಡಗಿಸಿದ ಆ ವಾನರ ಶ್ರೇಷ್ಠ ವಾಲಿಯೇನಾದ? ಇವರ್‍ಯಾರ ಆಟವೂ ಆ ರಾಮನ ಮುಂದೆ ನಡೆಯಲಿಲ್ಲ. ಹಾಗಿರುವಾಗ ನಾವೇಕೆ ರಾತ್ರಿ ಕಂಡ ಬಾವಿಯಲ್ಲಿ ಹಗಲು ಬೀಳಬೇಕು?

ಜಾರೆಯೇ ಸೀತೆ ಸಾಕ್ಷಾತ್‌ಲಕ್ಷ್ಮಿಯಾ ದೇವಿ। ನಾರಾಯಣನು ರಾಮಚಂದ್ರನು ಶೇಷಾವ। ತಾರಿ ಲಕ್ಷ್ಮಣನು ಬಂದು ॥ ದೇವತೆಗಳ ಮಾರಿಗೋಸ್ಕರ ದೊಳಿಂದು । ನಮ್ಮನು ಯಮ । ನೂರಿಗಟ್ಟದೆ ಬಿಡರರಿತುಕೊ ಮುಂದು ॥ ಇನ್ನಾ ॥ ೩ ॥

ವಿಭೀ:– ಅಣ್ಣಾ, ಸೀತಾದೇವಿಯನ್ನು ಒಬ್ಬ ಜಾರನಾರಿಯೆಂದು ತಿಳಿದಿರುವೆಯಾ? ಆಕೆ ಸಾಮಾನ್ಯ ನಾರಿಯಲ್ಲ; ಸಾಕ್ಷಾತ್ ಲಕ್ಷ್ಮೀದೇವಿಯ ಅವತಾರ. ಶ್ರೀರಾಮನೇ ಲೋಕದ ಸ್ಥಿತಿಕರ್ತನಾದ ಶ್ರೀ ಮನ್ನಾರಾಯಣ. ಲಕ್ಷ್ಮಣನು ಆದಿ ಶೇಷನ ಅವತಾರ. ಅಣ್ಣಾ, ಈ ವಾನರರೆಲ್ಲ ಶ್ರೀ ದೇವರ ಆದೇಶದಂತೆ ವಾನರರಾಗಿ ಅವತರಿಸಿದ ದೇವತೆಗಳೆಂದು ತಿಳಿ. ಭೂಲೋಕದ ಜನರಲ್ಲಿ ಅಧರ್ಮ, ಅನ್ಯಾಯ, ಅನೀತಿಗಳು ಅಧಿಕವಾದಾಗ ಅವರ ಪಾಪವನ್ನು ಹೊರಲಾರದೆ ಭೂದೇವಿ ಶ್ರೀ ಹರಿಗೆ ಮೊರೆಯಿಡುವಳಂತೆ. ಆಗ ಶ್ರೀ ಹರಿಯು ಅವತಾರವೆತ್ತಿ ಅಧರ್ಮಿಗಳನ್ನು ಅಡಗಿಸಿ, ಸಜ್ಜನರನ್ನು ರಕ್ಷಿಸಿ, ಭೂಭಾರ ಹರಣ ಮಾಡಿ ಲೋಕ ಕ್ಷೇಮ ಸಾಧಿಸುವನಂತೆ. ಹಾಗೆಯೇ ಪಾಪ ಕರ್ಮಿಗಳಾದ ರಕ್ಕಸರವಧೆಗಾಗಿ ಹೂಡಿದ ಹಂಚಿಕೆಯಿದೆಂದು ತಿಳಿದು ಕೋ. ಇನ್ನಾದರೂ ನಿನ್ನ ಛಲ ತ್ಯಜಿಸಿ ರಾಮನಿಗೆ ಶರಣಾಗು.

ರಾವಣ:– ಸಾಕು ಮುಚ್ಚು ಬಾಯಿ.

ರಾಗ– ತೋಡಿ–ಅಷ್ಟತಾಳ

ಏನೆಂದೆ । ತಮ್ಮ । ಏನೆಂದೆ ॥ ಪಲ್ಲ ॥ ಏನೆಂದೆ ತಮ್ಮ ಏತಕೆ ಮರುಳಾದೆ । ದಾನವರುಗಳ ಶಕ್ತಿಯ ನೀನರಿಯದೆ ॥ ಅ. ಪ. ॥.

ರಾವಣ:— ತಮ್ಮ ಏನು ಹೇಳಿದೆ? ಬಿಡುಗಣ್ಣ ರಾದರೂ ಕಣ್ಣೆತ್ತಿ ಕಾಣಲಾರದ

ಈ ಮಹೋನ್ನತ ಸಭೆಯಲ್ಲಿ ಈ ರೀತಿಯ ಅವಿಚಾರದ ಮಾತಾಡಬಹುದೇ? ನಿನಗೇಕೇ ಹುಚ್ಚು ಹಿಡಿಯಿತು? ನಮ್ಮ ಈ ಕದನ ಕರ್ಕಶ ಭೀಮ ವಿಕ್ರಮಿಗಳ ಶಕ್ತಿ ಸಾಮರ್ಥ್ಯ, ಶೌರ್ಯ ಸಾಹಸಗಳನ್ನರಿಯದವನಂತೆ ಏನು ಹೇಳಿದೆ? ನಮ್ಮ ಸಮರ ಶಕ್ತಿಯನ್ನು ಅರಿಯದೆ ಹೋದೆಯಲ್ಲ!

ಮನುಜರ ಸೈನ್ಯ ಲಂಕಾ ದುರ್ಗವೆಮಗೆ | ಅನುಜಗೆ ಸರಿಯಾರು ಕುಂಭಕರ್ಣ ನಿಗೆ|| ಧನಪತಿ ಜ್ಯೇಷ್ಠ ತಾನೈಶ್ವರ್ಯದೊಳಗೆ | ಘನ ಪರಾಕ್ರಮಿ ಇಂದ್ರಜಿತು ಕಂದನೆನಗೆ || ಏನೆಂದೆ || ೧ ||

ರಾವಣ:- ವಿಭೀಷಣ, ನಮ್ಮ ಸುವರ್ಣ ಲಂಕೆಯಿದೆಯಲ್ಲ. ವಿಶಾಲ ವಾಗಿರುವ ಸಾಗರದಿಂದ ಪರಿವೇಷ್ಟಿತವಾಗಿರುವುದರಿಂದ ದುರ್ಗಮವಾದ ಜಲ ದುರ್ಗವೆನಿಸಿ ಅಗಮ್ಯವೆನಿಸಿದೆ. ಅಜೇಯರಾದ ಅನೇಕ ಕೋಟಿ ದಾನವರಿಂದ ರಕ್ಷಿ ಸಲ್ಪಡುತ್ತಿರುವುದರಿಂದ ಜನದುರ್ಗವೆನಿಸಿ ವೈರಿಗಳಿಗೆ ದುಷ್ಪ್ರವೇಶ್ಯವೆನಿಸಿದೆ. ಅಭೇದ್ಯವಾದ ಕೋಟೆ ಕೊತ್ತಲಗಳಿಂದ ಭದ್ರವಾಗಿದೆ. ಕೋಟಿ ಸಂಖ್ಯೆಯ ಭೂತ ಬೇತಾಳ ಬ್ರಹ್ಮರಕ್ಕಸರು ಹಗಲು ರಾತ್ರಿ ಕಾವಲಿದ್ದಾರೆ. ಇಂತಹ ಲಂಕೆಗೆ ಪ್ರವೇಶಿಸುವುದೆಂದರೆ ಪ್ರತ್ಯಕ್ಷ ಮೃತ್ಯುವಿನ ಬಾಯೊಳಗೆ ಹೊಕ್ಕಂತೆ. ಇಷ್ಟೇ ಅಲ್ಲ; ನನ್ನ ಸಹೋದರ ಕುಂಭಕರ್ಣನ ವಿಚಾರ ಹೇಳಬೇಕೇ? ಸಿಟ್ಟುಗೊಂಡರೆ ಸೃಷ್ಟಿ ಯನ್ನೇ ಕುಟ್ಟಿ ಪುಡಿಮಾಡಿ ನುಂಗಿಬಿಟ್ಟಾನು. ತನ್ನ ತಾಮಸೀ ವಿದ್ಯಾಬಲದಿಂದ ಮಹೇಂದ್ರನನ್ನು ಸೋಲಿಸಿ ಹಿಡಿದು ತಂದ ಇಂದ್ರಜಿತುವನ್ನು ಇದಿರಿಸಬಲ್ಲವ ನ್ಯಾರು? ದೇವಾಂತಕ, ನರಾಂತಕ, ಅತಿಕಾಯ, ಮಹಾಕಾಯ, ಕುಂಭ, ನಿಕುಂಭ ಮಕರಾಕ್ಷ ವಿರೂಪಾಕ್ಷ ಮಹೋದರ ಮೊದಲಾದವರ ಇದಿರು ಸುಳಿಯಬಲ್ಲವ ರ್‍ಯಾರು ಹೇಳು. ಇಷ್ಟೇಅಲ್ಲ -

ಈರೇಳು ಜಗದೊಡೆತನ ನಮಗುಂಟು। ಮಾರವೈರಿಯ ಭಕ್ತಿ ಮನದಿ ಜೋರುಂಟು ॥ ಸೇರಿಪ್ಪ ದಿಕ್ಪಾಲರೊಳು ನಮ್ಮ ನೆಂಟು। ಬೇರೇನು ಯೋಚಿಸ ಲಿದರೊಳೇನುಂಟು ॥ ಏನೆಂದೆ ॥ ೨ ॥

ರಾವಣ:- ಆ ರಾಮನಲ್ಲಿ ಈಗ ಏನುಂಟು? ಹುಟ್ಟಿದ ನಾಡಿನಿಂದ ಹೊರಗಾದವ. ನಟ್ಟಡವಿಯಲ್ಲಿ ಮಡದಿಯನ್ನು ಹೋಗಾಡಿದವ. ಅಂದಿನಿಂದೀವರೆಗೆ ಕೂಗಾಡಿ ದವ. ನಮಗಾದರೋ ಹದಿನಾಲ್ಕು ಲೋಕದ ಒಡೆತನವಿದೆ. ಸೃಷ್ಟಿಕರ್ತ

ಬ್ರಹ್ಮ ನನ್ನಜ್ಜ. ಲಯಕರ್ತರುದ್ರ ನಮ್ಮ ಆರಾಧ್ಯದೈವ. ಅಷ್ಟದಿಕ್ಪಾಲಕರು ನಮ್ಮ ಊಳಿಗದವರು. ಅಗೋ ಅಲ್ಲಿ ವಾಯು ಕಸಗುಡಿಸುತ್ತಿದ್ದಾನೆ; ಅಗ್ನಿ ಒಲೆ ಉರಿಸುತಿದ್ದಾನೆ; ವರುಣ ನೀರುತರುತಿದ್ದಾನೆ. ನಮಗೆ ಸರಿಯಾರಿದ್ದಾರೆ? ನಮ್ಮ ವೈಭವಕ್ಕೇನು ಕೊರತೆಯಿದೆ? ನಮ್ಮನ್ನು ಇದಿರಿಸಬಲ್ಲ ವೀರರು ಯಾರು ಹೇಳು

ಸೀತೆಯ ನಾ ಬಿಟ್ಟು ಕೊಟ್ಟರೆ ಹಿಂದೆ । ಪೇತುಗನೆಂದೆಂಬ ಹೆಸರಿಡು ಮುಂದೆ ॥ ಮಾತಿಲಿ ಬೆದರಿಸಿ ಬಿಡಿಸಲು ನಮ್ಮ । ತಾತನಿಂದಾಗದು ಛೀ ಹೋಗು ತಮ್ಮ ॥ ಏನೆಂದು ॥ ೩ ॥

ರಾವಣಃ-- ವಿಭೀಷಣ, ನನ್ನನ್ನು ಏನೆಂದು ತಿಳಿದಿರುವೆ? ನನ್ನ ಹೆಸರು ಹೇಳಿದರೆ ಮೂರು ಲೋಕ ನಡುಗುವುದು. ಹೀಗಿದ್ದು ಆ ಕಾಡಾಡಿ ರಾಮನಿಗೆ ಮರಮರ ಹಾರುವ ಮಂಗಗಳಿಗೆ ಬೆದರಿ ಸೀತೆಯನ್ನು ಬಿಟ್ಟು ಕೊಡಬೇಕೇ? ಹಾಗೆ ಕೊಟ್ಟದ್ದೇ ಆದರೆ ಲೋಕದ ಜನ ನನ್ನನ್ನು ಪೇತುಗನೆಂದು ಕರೆಯಲಾರರೆ? ನೀನೊಬ್ಬ ಹೆಂಬೇಡಿಯಾದ ಮಾತ್ರಕ್ಕೆ ಕಡುಗಲಿಗಳಾದ ನಾವು ಪೇಡಿಗಳಾಗಿ ಬಾಳಬೇಕೇ? ಬೆದರಿಕೆಯ ನುಡಿಗಳನ್ನಾಡಿ, ನಮ್ಮಿಂದ ಸೀತೆಯನ್ನು ಬಿಡಿಸಿ ಕೊಡಲು ನಿನ್ನಿಂದ ಬಿಡು, ನಮ್ಮನ್ನು ಪಡೆದ ತಂದೆಯಿಂದಲೂ ಆಗಲಾರದು. ಈ ವೀರಾಧಿವೀರರಿದಿರು ನಿಲ್ಲಲು ಕೂಡಾ ನೀನು ಯೋಗ್ಯನಲ್ಲ ತೊಲಗಿಲ್ಲಿಂದ.

ವಿಭೀಃ- ಅಣ್ಣಾ, ತಪ್ಪು ತಿಳಿಯಬಾರದು. ನೀನು ಅಸಹಾಯಕ, ನಿನ್ನಲ್ಲಿ ಸಾಮರ್ಥ್ಯವಿಲ್ಲ; ನೀನು ಹೇಡಿಯೆಂದು ನನ್ನಭಿಪ್ರಾಯವಲ್ಲ. ಹಾಗೆ ನಾನು ಹೇಳಲೂ ಇಲ್ಲ. ದೇವರು ನಮಗೆ ಕೊಟ್ಟ ಶಕ್ತಿ ಸಾಮರ್ಥ್ಯಗಳಿಂದ ಪರರಿಗೆ ಕೇಡಾಗಬಾರದು. ಅದರಿಂದ ಪರರಿಗೆ ಉಪಕಾರವಾದರೆ ಅದು ಸಾರ್ಥಕ. ಅದಕ್ಕಾಗಿಯೇ ಈ ಮಾತು ಹೇಳಿದೆ.

ಆತನಿಗುಪಕಾರವೆಂಬಡೆ ನಿನ್ನ । ತಾತನೊ ತಮ್ಮನೊ ಮಗನೊ ಮೈದುನನೊ ॥ ಕೋತಿಗಳರಸನ ಕೊಂಡಾಡುವುದಕೆ । ಸೀತೆಯ ನೆಂಟನೊ ಬಳಿಯ ದಾಯಾದಿಯೊ ॥ ಏನೆಂದೆ ॥ ೪ ॥

ರಾವಣಃ- ವಿಭೀಷಣ, ಆ ರಾಮನಿಗೆ ಉಪಕಾರ ಮಾಡೆಂದು ನೀನೀರೀತಿ ನಮ್ಮನ್ನು ನಿರ್ಬಂಧಿಸಲು ಆತ ನಿನಗೇನಾಗಬೇಕು? ಅವನೇನು ನಿನಗೆ ತಾತನೊ,

ತಮ್ಮನೊ, ಅಣ್ಣನೊ, ಭಾವನೊ, ಮಾವನೊ, ವೈದುನನೋ? ಅಥವಾ ನೀನೇನು ಸೀತೆಯ ನೆಂಟನೊ ದಾಯಾದಿಯೊ, ತಂದೆಯೊ, ಅಜ್ಜನೊ ಏನಾಗಬೇಕು? ಬಾಯಿ ಬತ್ತುವಂತೆ ಹುಚ್ಚು ಹುಚ್ಚಾಗಿ ಹರಟುವೆಯಲ್ಲ? ಆ ಕೋತಿಗಳನ್ನು ಅವುಗಳ ಒಡೆಯನನ್ನು ಈ ನಮ್ಮ ಬೃಹತ್ಸಭೆಯಲ್ಲಿ ವಂದಿ ಮಾಗಧರಂತೆ ಹೊಗಳಲು ನಿನಗೆ ನಾಚಿಕೆ ಕೂಡಾ ಆಗಲಿಲ್ಲವಲ್ಲ. ಮನೆಗೆ ಮಾರಿ ಪರರಿಗೆ ಉಪಕಾರಿ. ನಿನ್ನ ಮೋರೆಗೆ ಬೆಂಕಿ ಬೀಳಲಿ. ತೋರಬೇಡ.

ವಿಭೀ:- ಅಣ್ಣ, ನೀನು ಎಷ್ಟು ಬೇಕಾದರೂ ಹೀಯಾಳಿಸು; ತಿರಸ್ಕರಿಸು- ಅದಕ್ಕಾಗಿ ನಾನೇನೂ ಬೇಸರಿಸುವುದಿಲ್ಲ; ನಿನ್ನ ಒಳಿತಿಗಾಗಿ ಅವನ್ನೆಲ್ಲ ಸಹಿಸುವೆನು. ಆದರೆ ನನ್ನ ಅರಿಕೆಯನ್ನು ಆಲಿಸು.

ರಾಗ-ಕಾಫಿ-ಅಷ್ಟತಾಳ.

ನೀನೇಕೆ ಮರುಳಪ್ಪುದಣ್ಣ । ಇನ್ನು । ಜಾನಕಿಯನು ಬಿಟ್ಟು ಕೊಡುವುದೆ ಬಣ್ಣ ॥ ಪ ॥

ವಿಭೀ:-- ಅಗ್ರಜ, ನೀನೇನೂ ಅಲ್ಪಕುಲದಲ್ಲಿ ಜನಿಸಿದವನಲ್ಲ. ಜಗತ್ತಿನಲ್ಲಿ ಶ್ರೇಷ್ಠವೆನಿಸಿದ ಬ್ರಹ್ಮಕುಲದಲ್ಲಿ ಹುಟ್ಟಿರುವೆ. ಅಜ್ಞಾನಿಯೆನ್ನಲೇ-ಬಹುಶ್ರುತಿ ಸ್ಮೃತಿಗಳು ಮುಖೋದ್ಗತವಾಗಿವೆ. ಆಚಾರಹೀನನೆನ್ನಲೇ-- ಶಿವಪೂಜಾಧುರಂಧರ. ಶೌರ್ಯದಲ್ಲಿ ಕಡಿಮೆಯೇ- ಮೂರುಲೋಕಗಳನ್ನು ಜಯಿಸಿರುವೆ. ಅಧಿಕಾರವಲ್ಲಿ ನೋಡಿದರೆ-- ಮೂರುಲೋಕ ನಿನ್ನಾಧೀನ. ಹೀಗಿದ್ದೂ ನೀನೇಕೆ ಮರುಳಾಗಿರುವೆಯೋ ನಾನರಿಯೆ. ಇಂತಹ ಮಹಾ ಪ್ರಭೃತಿಯಾದ ನೀನು ಆ ರಾಮನ ಪತ್ನಿಯನ್ನು ಕದ್ದು ತಂದುದು ಮಹಾ ಮರುಳಾಟ. ಆದಾಗ್ಯೂ ಆದ ತಪ್ಪನ್ನು ತಿದ್ದಿ ಸರಿಪಡಿಸಿಕೊಳ್ಳುವುದು ಜಾಣರ ಕಾರ್ಯ ಅದಕ್ಕಾಗಿ ಹೇಳುತ್ತೇನೆ. ಈ ಒಣಪ್ರತಿಷ್ಠೆಯ ಛಲವನ್ನು ತ್ಯಜಿಸಿ, ಸೀತೆಯನ್ನು ಬಿಟ್ಟು ಕೊಡುವುದು ನಮಗೆ ಗೌರವವೇ ಹೊರತು ಅವಮಾನವಲ್ಲ.

ರಾವಣ:-- ಅಯ್ಯೋ ಹುಚ್ಚ. ನಮ್ಮಂಥ ಧುರ ದುರಂಧರ, ಜಗಜಟ್ಟಿ ರಕ್ಕಸರಿರುವಾಗ ಬಲಹೀನರಂತೆ ನಾವೇಕೆ ವರ್ತಿಸಬೇಕು?

ಕೊಬ್ಬಿದುಮ್ಮದವೆಲ್ಲ ಬಿಡುಗು । ಕಪಿ । ಮಾರ್ಬಲ ಬಂದೆಮ್ಮ ಮುಂದೆಯು ಬಡಿಗು ॥ ಸರ್ಬಿ ಪಟ್ಟಣವೆಲ್ಲ ಸುಡುಗು । ಜಗ । ದಬ್ಬಿ ಜಾನಕಿಯಿಂದ ಸೌಭಾಗ್ಯ ಕೆಡುಗು ॥ ೧ ॥

ವಿಭೀ: ಅಣ್ಣಾ, ಕುಲಮದ, ಅರ್ಥಮದ, ಅಧಿಕಾರಮದ, ರಕ್ತಮ ಮೊದಲಾದ ಮದ ಒಂದೊಂದೇ ಇದ್ದರೂ ಮನುಷ್ಯ ಹಾಳಾಗುವನು, ಎಂದಾಗ ದುರ್ದೈವದಿಂದ ಎಲ್ಲಾ ಮದಗಳೂ ನಿನ್ನಲ್ಲಿ ಸೇರಿಕೊಂಡಿವೆ, ಆ ದುರ್ಗುಣ ಗಳನ್ನು ತ್ಯಜಿಸಿಬಿಡು.

ಅನ್ಯಾಯ ಮಾಡಿರುವ ನಮ್ಮ ಪಾಲಿಗೆ ಮರ ಮರ ಹಾರುವ ಮಂಗಗಳೇ ಮಾರಿಯಾಗಿ ನಮ್ಮ ತಲೆ ಒಡೆಯದಿರಲಾರವು. ಸಂಪತ್ಸಮೃದ್ಧವಾದ, ಭಾಗ ಲಕ್ಷ್ಮಿಯ ತವರೂರೆನಿಸುತಿರುವ ಈ ನಮ್ಮ ಲಂಕೆ ಸುಟ್ಟು ಸುಡುಗಾಡಾದೀತು. ಜಗನ್ಮಾತೆಯಾದ ಸೀತಾದೇವಿಯಿಂದಾಗಿ ನಮ್ಮ ಈ ಅಷ್ಟ ಸೌಭಾಗ್ಯಗಳು ನಷ್ಟ ವಾಗಿ ಹೋದಾವು. ಆದ್ದರಿಂದ ಈ ಮರುಳಾಟ ಬಿಟ್ಟು, ವಿವೇಕಿಯಾಗಿ ನಡೆದು ಕೋ.

ರಾವಣ:-- ನಿನ್ನ ದೃಷ್ಟಿಯಲ್ಲಿ ವಿವೇಕವೆಂದರೆ ಹೇಗೆ?

ಸೀತಾದೇವಿಯ ಕರಕೊಣಕು । ಒಳ್ಳೆ । ಜಾತಿ ಮುತ್ತು ಮಾಣಿಕ ತೆಕ್ಕೊಳುಕು ‖ ಈ ತಪ್ಪಪಾಲಿಸೆಂದೆನುಕು । ರಘು | ನಾಥ ಸ್ವಾಮಿಯ ಪಾದಗಳ ಕಟ್ಟಿಕೊಣುಕು ॥ ೨ ॥

ವಿಭೀ:- ಅರಣ್ಯದಲ್ಲಿ ಅಬಲೆಯಾಗಿದ್ದ ಸೀತೆಯನ್ನು ಅಪಹರಿಸಿ ತಂದುದು ಪರಮ ಅನ್ಯಾಯ. ನಿರಪರಾಧಿನಿಯಾದ ಆಕೆಯನ್ನು ಬಂಧನದಲ್ಲಿರಿಸಿರುವುದು ಆಕೆಗೆ ಮಾಡಿದ ಮಹಾಪರಾಧ. ಮಾಡಿದ ತಪ್ಪನ್ನು ನಾವಾಗಿ ಒಪ್ಪಿಕೊಳ್ಳು ವುದರಲ್ಲಿ ಘನತೆಯಿದೆ, ಗೌರವವಿದೆ. ಅಪರಾಧಕ್ಕೆ ಪ್ರಾಯಶ್ಚಿತ್ತವೂ ಆಗತ್ತೆ ಆದಕ್ಕಾಗಿ ಸೀತೆಯನ್ನು ನಾವಾಗಿ ಹಿಂದಕ್ಕೆ ಒಪ್ಪಿಸೋಣ. ಒಳ್ಳೇ ಜಾತಿ ಮುತ್ತು ಮಾಣಿಕ್ಯಗಳನ್ನು ಕಾಣಿಕೆಯಾಗಿ ಕೊಡೋಣ. ಆ ರಾಮಚಂದ್ರನಲ್ಲಿ ಮಾಡಿದ ತಪ್ಪನ್ನು ಒಪ್ಪಿಕೊಂಡು ನಮ್ಮನ್ನು ಕ್ಷಮಿಸಿ ಕಾಪಾಡಬೇಕೆಂದು ಕೇಳಿಕೊಳ್ಳೋಣ.

ರಾವಣ:- ಏನು, ನಾವೇನು ಮಾಡಬೇಕು?

ರಾಮಚಂದ್ರಂಗೆ ಪೊಡಮಡುವೊ । ನಮ್ಮ | ಸೀಮೆಯೊಡೆಯನಿಗೆ ಕಪ್ಪವ ಕೊಡುವೊ ‖ ಕಾಮುಕತನವೆಲ್ಲ ಬಿಡುವೊ | ರಾಮ । ಸ್ವಾಮಿಯ ಮನದೊಲ ವಿದ್ದಂತೆ ನಡೆವೊ ‖ ೩ ‖

ವಿಭೀ:- ಆ ರಘು ರಾಮಚಂದ್ರನಿಗೆ ನಮಸ್ಕರಿಸೋಣ ಜಗದೊಡೆಯನಿಗೆ ಸಾವಾಗಿ ಕಪ್ಪಕಾಣಿಕೆ ಕೊಡೋಣ. ನಮ್ಮಲ್ಲಿ ನೆಲೆಗೊಂಡಿರುವ ಕಾಮುಕ ತನಗಳನ್ನೆಲ್ಲ ತ್ಯಜಿಸಿ ಪರಿಶುದ್ಧ ಮನಸ್ಕರಾಗೋಣ. ನಿರ್ಮಲ ಹೃದಯದಿಂದ ರಾಮಚಂದ್ರನನ್ನು ಕಂಡು, ಆ ಮಹಾಸ್ವಾಮಿಯ ಅಭಿಮತದಂತೆ ನಡೆದು ಮುಂದೆ ಬಾಳೋಣ ಇದರಿಂದಾಗಿ ನಮ್ಮ ಸುವರ್ಣಲಂಕೆಗೆ ಬಂದ ಮಹದಾಪತ್ತು ತೊಲಗುವುದು. ನಮ್ಮ ಸಲುವಾಗಿ ತಮ್ಮ ಪ್ರಾಣ ತೆರಲು ಸಿದ್ಧರಾಗಿ ನಿಂತಿರುವ, ನಮ್ಮ ಪ್ರೀತಿಯ ಲಕ್ಷ ಲಕ್ಷ ಸೈನಿಕರ ಪ್ರಾಣ ಉಳಿಯುವುದು. ಕೋಟಿ ಕುಟುಂಬಗಳ ಉದ್ಧಾರವಾಗುವುದು. ಲಂಕೆಯ ಒಡೆತನ ನಮಗೆ ಸ್ಥಿರವಾಗುವುದು. ನನ್ನೀ ವಿವೇಕದ ಮಾತಿಗೆ ಮನಸ್ಸು ಕೊಡು. ಬರಿದೆ ಮಂಕುಗಳ ಮಾತಿಗೆ ಮರುಳಾಗಿ ಸರ್ವನಾಶಕ್ಕೆ ಸಿದ್ಧನಾಗಬೇಡ. ಸಾರಿ ಸಾರಿ ಹೇಳಿದ್ದೇನೆ.

ರಾವಣ:- ಮುಚ್ಚು ಬಾಯಿ.

ರಾಗ- ಭೈರವಿ. ಝಂಪೆತಾಳ

ತಮ್ಮ ಸ್ವರೂಪಕ್ಕೆ ತಕ್ಕ ಮಾತಾಡಿದನು । ಅಮ್ಮ ಕೈಕಸೆಗಾಗಿ ಒಮ್ಮೆ ಸೈರಿಸಿದೆ ‖ ೧ ‖

ರಾವಣ:- ನಾಲಗೆ ಕುಲ ಹೇಳುತ್ತದೆ; ಕಾರ್ಯ ಮನವನ್ನು ತೋರುತ್ತದೆ ಎಂಬ ಮಾತು ಸುಳ್ಳಲ್ಲ. ಈ ಕಡು ಹೇಡಿಯ ನುಡಿ ಅವನ ಸ್ವರೂಪವನ್ನೆತ್ತಿ ತೋರುತ್ತಿದೆ. ಚತುರ್ದಶಭುವನದಲ್ಲಣ, ರಾಕ್ಷಸಕುಲ ಚಕ್ರೇಶ್ವರನಿಗೆ ಈ ಅಂಜುಬುರುಕ ತಮ್ಮನೇ? ಅಯ್ಯೋ ಏನು ಹೇಳಲಿ. ಏನು ಮಾಡಲಿ? ನಾಚಿಕೆ, ನಾಚಿಕೆ, ಇವನಿಗೀಗಲೇ ತಕ್ಕ ಶಾಸ್ತಿ ಮಾಡುತ್ತಿದ್ದೆ. ಆದರೆ ಹಡೆದ ಮಾತೆ ಕೈಕಸಾದೇವಿಯನ್ನು ನೆನಸಿ ಒಮ್ಮೆಗೆ ಸೈರಿಸಬೇಕಾಯಿತು. ಅಯ್ಯೋ.

ಅಮಮ ಸಗರಾನ್ವಯ । ಮಮಕಾರವುಳ್ಳತನ। ನಮಗೆ ಬುದ್ಧಿಯ ಪೇಳಲವನೆಷ್ಟರವನು ‖ ೨ ‖

ರಾವಣ :-ಅಯ್ಯೋ, ಇವನ ಬುದ್ಧಿಗೇಡಿತನಕ್ಕೇನು ಹೇಳಲಿ? ಮಹಾ

ವಿಕ್ರಮಿಗಳಾದ ನಮ್ಮನ್ನೆಲ್ಲ ಹೀಯಾಳಿಸುತ್ತಿದ್ದಾನೆ. ಸಗರ ಕುಲದಲ್ಲಿ ಜನಿಸಿದ ಆ ಹುಲು ಮನುಜ ರಾಮನನ್ನು ಶಬ್ದ ಭಂಡಾರ ಬರಿದಾಗುವ ತನಕ ಹೊಗಳುತ್ತಿದ್ದಾನೆ. ಇವನಿಗೆ ಆತನಲ್ಲಿರುವ ಭಯ, ಭಕ್ತಿ, ಮಮಕಾರವಾವರೂ ಎಷ್ಟು? ತಾನೊಬ್ಬ ಮಹಾಜ್ಞಾನಿಯೆಂದು ಭಾವಿಸಿಕೊಂಡು, ನಮಗೆ ಬುದ್ಧಿ ಹೇಳತೊಡಗಿದ್ದಾನೆ. ಮನೆತನದ, ಅರಸುತನದ, ಅಧಿಕಾರದ ಮಾನತೂರಾಟ ಮಾಡಲು ಬೋಧಿಸುತ್ತಿದ್ದಾನೆ. ಮೂರ್ಖ, ಎಳ್ಳಿನಷ್ಟು ಬುದ್ಧಿಯಿದ್ದರೆ, ವಿರೋಧಿಯ ಕಾಲಿಗೆ ಬಿದ್ದು ಕ್ಷಮೆ ಬೇಡಬೇಕೆನ್ನುವನೇ? ತಿಳಿಗೇಡಿ

ಜೋಡಾಗಿ ಜನಿಸಿರ್ದ ಜಾಣ್ಮೆಗಳ ಬಗೆ ಬೇರೆ । ಹೇಡಿತನ ನಯ ಕೈ । ಗೂಡಿತನುಜನಿಗೆ ॥ ೩ ॥

ರಾವಣ :- ಈ ಮಾನಗೇಡಿಯ ಮಾತುಗಳಿಗೆ ಏನು ಹೇಳಲಿ? ನಮ್ಮ ವಂಶವಲ್ಲಿ ಇವನೇಕೆ ಹುಟ್ಟಿದ? ಏಕೆ ಹುಟ್ಟಿದ? ವೀರಮಾತೆಯಾದ ಕೈಕಸೆಯ ಗರ್ಭದಲ್ಲಿ ಜನಿಸಿದವರಲ್ಲಿ ಇವನ ಹೊರತು ಬೇರೆ ಯಾರೂ ಇಂತಹ ಹೇಡಿಗಳಾಗಿಲ್ಲ. ನನ್ನ ವಿಚಾರವಂತಿರಲಿ. ಸಹೋದರ ಕುಂಭಕರ್ಣ ಕೋಪಗೊಂಡರೆ ಸಮಗ್ರ ಜಗತ್ತನ್ನು ಹುರಿದು ಮುಕ್ಕಿ ಬಿಟ್ಟಾನು. ತಂಗಿ ಶೂರ್ಪನಖಾ ಹೆಣ್ಣಾಗಿದ್ದರೂ, ಜಗತ್ತನ್ನು ಹಣ್ಣು ಮಾಡಿ ಬಿಟ್ಟಾಳು. ಅಂತಹ ಕಡುಗಲಿಗಳು ಜನಿಸಿದ ಒಡಲಿನಲ್ಲಿ ಈ ರಣಹೇಡಿ, ಮಾನಗೇಡಿ, ಮತಿಗೇಡಿ ಜನಿಸಿಬಿಟ್ಟನಲ್ಲ. ಅಯ್ಯೋ—

ಗಂಡುಸಲ್ಲವರ ಭಯ । ಗೊಂಡೆಯಾದರೆ ನಿನ್ನ । ಹೆಂಡತಿಯ ಕೊಟ್ಟು ಬೇ । ಡಿಕೊಂಡು ಬಾ ಮನೆಗೆ ॥ ೪ ॥

ರಾವಣ :- ಏ ಭಂಡ, ಆ ಕಾಡುಕಪಿಗಳನ್ನು ಕಂಡು ಭಯಗೊಂಡು ನಡುಗುವ ನಿನಗೇಕೆ ಗಂಡಸುತನ? ವಿರೋಧಿಗಳು ದಂಡೆತ್ತಿ ಬಂದು ಮನೆ ಬಾಗಿಲಲ್ಲಿ ಬೀಡು ಬಿಟ್ಟಿರುವಾಗ ಗಂಡಸಾಗಿರುವವನು ಹಗೆಗಳ ರುಂಡ ಚೆಂಡಾಡುವ ಗಂಡುತನದ ಮಾತಾಡಿಯಾನೇ ಹೊರತು, ಈ ರೀತಿಯ ಷಂಡತನದ ಮಾತಾಡುವನೇ ! ಎಲವೊ ಭಂಡರ ಗಂಡ, ಭಯಗೊಂಡಿರುವೆಯಾದರೆ, ನಿನ್ನ ಹೆಂಡತಿಯನ್ನು ಆ ರಾಮನಿಗೆ ಪಾದಕಾಣಿಕೆಯಾಗಿ ಒಪ್ಪಿಸಿ, ಕಾಲು ಹಿಡಿದು

ಜೀವದಾನ ಬೇಡಿಕೊಂಡಿರು. ನಡೆ, ನಡೆ. ಇನ್ನೆಲ್ಲಿಯಾದರೂ ಓಸುಣತನದ ಈ ಮಾತಾಡಿದ್ದೇ ಆದರೆ ಬೆನ್ನು ಹುಡಿಯಾದೀತು; ಜೋಕೆ.

ಇಂದ್ರಜಿತು ನಿನ್ನ ಕಿರಿ । ತಂದೆಯಾಡಿದ ಮಾತು | ಬಂದುವೇ ಮನಕೆ ಸೇ । ಳೆಂದಖಿ ಬೆಸಗೊಂಡ || ೫ ||

ರಾವಣ :-ಮಗನೇ, ಈಂದ್ರಜಿತು, ನಿನ್ನ ಚಿಕ್ಕ ತಂದೆಯಾಡಿದ ಮಾತು ಕೇಳಿದೆಯಲ್ಲ ಕಂದ. ನಿನಗೆ ಹೇಗೆ ಕಾಣಿಸುತ್ತಿದೆ? ನಿನ್ನ ಮನಸ್ಸಿಗೆ ಸರಿ ತೋರುವುದೇ? ಈ ಹೇಡಿ, ನಪುಂಸಕ, ಮಾನಗೆಟ್ಟವ ಈ ತುಂಬಿದ ಸಭೆ ಯಲ್ಲಿ ಇಂಥ ಅವಿವೇಕದ ಮಾತಾಡಬಹುದೇ ಹೇಗೆ ?

ರಾಗ-ಸಾಂಗತ್ಯ-ರೂಪಕ ತಾಳ

ತಂದೆ ಕೇಳೈ ಪರಸತಿಯಳ ವಂಚಿಸಿ । ತಂ ದು ದ ನ್ಯಾ ಯ ರಾಜಸಕೆ ||
ಮುಂದಿನ್ನು ಬೆದರುತ್ತ ಬಿಟ್ಟೆವಾದರೆ ನಮ್ಮ । ನಿಂದಿಸುವರು ಲೋಕದೊಳಗೆ||೧||

ಇಂದ್ರಜಿತು :-ಜನಕ, ನಾವು ರಕ್ಕಸರೇನೋ ನಿಜ. ಆದಾಗ್ಯೂ ರಾಜ ರೆನಿಸಿಕೊಂಡವರು ಮಾತ್ರವಲ್ಲ; ಚಕ್ರೇಶ್ವರರು. ರಾಜ ಧರ್ಮ ಪರಿಪಾಲಿ ಸುವುದು ನಮ್ಮ ಪಾಲಿನ ಕರ್ತವ್ಯ. ಪರಪುರುಷನ ಪತ್ನಿಯನ್ನು ವಂಚನೆಯಿಂದ ಅಪಹರಿಸಿ ತಂದುದು ನಮ್ಮ ಘನತೆಗೆ ತಕ್ಕುದಲ್ಲ. ಅನ್ಯಾಯವೆಂದು ಲೋಕ ಹೇಳೀತು. ಹಾಗೆ ತರಬಾರದಿತ್ತು; ಆದರೆ ತಂದಾಯಿತು. ಈಗ ವೈರಿದಂಡು ಬಂತೆಂದು ತಿಳಿದ ಮೇಲೆ ಸೀತೆಯನ್ನು ಹಿಂದಕ್ಕೊಪ್ಪಿಸಿದ್ದೇ ಆದರೆ ಜಗತ್ತು ಏನು ಹೇಳೀತು? ಜಗದುದ್ದಂಡ ವೀರರು ನಮ್ಮಲ್ಲಿದ್ದೂ ಪ್ರಚಂಡವೀರರಾದ ನಾವು 'ರಾಮನಿಗೆ ಹೆದರಿ ಸೀತೆಯನ್ನೊಪ್ಪಿಸಿದರು' ಎಂದು ಜನರು ಕೈ ತಟ್ಟಿ ನಗಲಿಕ್ಕಿಲ್ಲವೆ? ಇಂಥ ಅಪಹಾಸ್ಯ ವೀರರಿಗೆ ಮರಣ ಸಮಾನ. ಆದ್ದರಿಂದ ನಾವೆಲ್ಲ ಬದುಕಿದ್ದು ಸೀತೆಯನ್ನು ಹಿಂದೆ ಒಪ್ಪಿಸಕೂಡದು. ಬಂದುದೆಲ್ಲ ಬರಲಿ. ನೋಡಿ ಬಿಡೋಣ.

ರಾವಣ:- ಮಗನೇ, ರಾಮನ ದಂಡು ಲಂಕೆಯ ಮೇಲೆ ದಾಳಿ ಮಾಡ ಲಿಕ್ಕೆಂದು ಬಂದಿದೆಯಂತೆ. ಸಾಗರದ ಬಳಿ ನಿಂದಿದೆಯಂತೆ. ಈ ವಿಚಾರವಲ್ಲಿ ನಿನ್ನ ಅಭಿಪ್ರಾಯವೇನು?

ಸಿಂಧುವನುತ್ತರಿಸುವರೆ ಕೂಡದು ಬಲ| ಬಂದರು ಬರಲಿ ರಾಘವನ ॥
ತಂದೆಯ ತಂದೆಗಸಾಧ್ಯ ಜಾನಕಿಯನ್ನು । ಹಿಂದಕಿನ್ನೊಯ್ಯುವದಂತಿರಲಿ ||೨||

ಇಂದ್ರ:- ತಂದೆಯೆ, ರಾಮನದಂಡು ಬಂದರೇನಾಯಿತು, ಸಾಗರದ ಬಳಿ ನಿಂದ ರೇನಾಯಿತು. ಶತಯೋಜನ ವಿಸ್ತಾರವಾದ ಸಿಂಧುವನುತ್ತರಿಸಬೇಕಲ್ಲ. ಅದೆಲ್ಲ ಸಾಗದ ಕಾರ್ಯ . ಒಂದು ವೇಳೆ ಸಾಗರ ದಾಟಿ ದಂಡು ಲಂಕೆಗೆ ಬಂದಿತೆನ್ನೋಣ. ಜಾಜ್ವಲ್ಯಮಾನವಾಗಿ ಪ್ರಜ್ವಲಿಸುವ ಯಜ್ಞೇಶ್ವರನ ಮೇಲೆ ಪತಂಗಗಳ ಹಿಂಡು ಬಂದೆರಗಿದಂತಾದೀತು. ಬಲಾಢ್ಯರೂ, ಮಾಯಾವಿಗಳೂ ಆದ ನಮ್ಮಲ್ಲಿ ಹೋರಾಡಿ ನಮ್ಮನ್ನೆಲ್ಲ ಜಯಿಸಿ, ಸೀತೆಯನ್ನು ಕೊಂಡೊಯ್ಯುವ ಸಾಹಸ ರಾಮನಿಂದ ಅಂತಿರಲಿ, ರಾಮನ ತಂದೆ ದಶರಥ, ಅವನ ತಂದೆಯ ತಂದೆ ಬಂದರೂ ಆಗದ ವಿಚಾರ. ಅದಕೇಕೆ ಯೋಚನೆ. ಬಿಟ್ಟುಬಿಡಿ ಆ ಮಾತು.

ರಾವಣಃ- ಭಲೆ, ಶಹಭಾಸ್ ! ಕುಲಕ್ಕೂ ಛಲಕ್ಕೂ ತಕ್ಕ ಮಾತಾಡಿದೆ. ಆದರೆ ಚಿಕ್ಕಯ್ಯನಿಗೆ ಇಷ್ಟಾದರೂ ಬುದ್ಧಿ ಬರಲಿಲ್ಲ ನೋಡು.

ಹಿರಿದಾದ ವನದ ಸಂಚರಿಸುವ ಕಪಿಗಳ । ಕರೆತಂದು ರಾಮ ರಕ್ಕಸರ ॥
ಧುರದೊಳೆಚ್ಚಾಡಿ ಸೋಲಿಸುವಂಥ ಮಾತತ್ತ। ಲಿರಲಿ ಏ ಚಿಕ್ಕಯ್ಯನವರೆ ||೩||

ಇಂದ್ರ:- ಓ ಚಿಕ್ಕಯ್ಯನವರೆ, ನೀವು ಹಿರಿಯರು. ನಿಮ್ಮ ಯೋಚನೆ, ಮಾತು ಹಿರಿದಾಗಿರಬೇಕಿತ್ತು. ಇಷ್ಟು ದೊಡ್ಡ ಸಭೆಯಲ್ಲಿ ಇಷ್ಟು ಚಿಕ್ಕ ಮಾತಾಡಿದ್ದು ನಿಮ್ಮ ಅವಿವೇಕದ ಪರಮಾವಧಿ. ಏನು, ರಾಮನ ಸೇನೆ ಬಂತೆಂದು ಬೆದರಿದಿರಾ? ಮರ ಮರ ಚರಿಸುವ ವಾನರರು ಸೇನೆ ತಂದು ಆ ರಾಮ, ವೀರಾಗ್ರೇಸರರಾದ ದಾನವ ಕೋಟಿಯನ್ನು ಜಯಿಸಿ, ಸೀತೆಯನ್ನು ಹಿಂದೆ ಕೊಂಡೊಯ್ಯುವ ಮಾತು ಕನಸಿನಲ್ಲಿಯೂ ಯೋಚಿಸಬೇಡಿ. ರಾಮ ಸೀತೆಯೊಡನೆ ಹಿಂತೆರಳುವ ದಂತಿರಲಿ, ಪ್ರಾಣ ಸಹಿತ ಉಳಿದರೆ, ಜಗತ್ತಿನಲ್ಲಿ ಅದಕ್ಕಿಂತ ಹೆಚ್ಚಿನ ಆಶ್ಚರ್ಯ ಬೇರೆ ಇರಲಾರದು. ಆದರೆ ನಿಮಗೀ ಬುದ್ಧಿ ಬಂದುದು ಮಾತ್ರ ಪರಮಾಶ್ಚರ್ಯ ವೇ ಸರಿ.

ಎಂದು ಪೌರುಷದ ಮಾತನು ಕೇಳಿ ಭುಗು ಭುಗಿ । ಲೆಂದು ಗರ್ಜಿಸಿ ವಿಭೀಷಣನು ॥ ಹಿಂದೊಂದು ಕಪಿ ನಡೆ ತಂದರೋಡಿಸಿದಂಥ ಕಂದ ನೀನಲ್ಲ ದಿಕ್ಕಾರು ||೪||

ವಿಭೀಃ- ಈ ಇಂದ್ರಾರಿಯ ಮಾತು ಕೇಳುವಾಗ ರೋಮ ರಂಧ್ರಗಳಲ್ಲಿ ರೋಷದ

ಕಿಡಿಹಾರುತಿದೆ. ಇಂತಹ ಹೊಗಳು ಭಟರು ಬಂಟರಾಗಿರುವಾಗ ರಾಜನಾದವನು ತುಂಟನಾಗಿರುವುದೇನು ಹೆಚ್ಚು! ಎಲವೋ ಇಂದ್ರಜಿತು ನಿನ್ನನ್ನು, ಪರಾಕ್ರಮಿ ಯಲ್ಲ ವೆಂದು ಯಾರು ಹೇಳಿದರು? ಆ ರಾಘವನಿಂದ ಸೀತಾನ್ವೇಷಣೆಗಾಗಿ ಕಳುಹಲ್ಪಟ್ಟ ಏಕೈಕ ಕಪಿ ಬಂದು, ಅಗಮ್ಯವಾದೀ ನಗರ ಪ್ರವೇಶಿಸಿ, ಸೀತೆ ಯನ್ನು ಕಂಡು ಅಶೋಕವನ ಭಂಗಿಸಿ, ಅಕ್ಷಕುಮಾರರನ್ನು ವಧಿಸಿ ಲಂಕಾ ನಗರ ದಹಿಸಿ ನಿನ್ನಯ್ಯನ ಕೊನೆಮೀಸೆ ಸುಟ್ಟನಲ್ಲ! ಆಗ ಅವನನ್ನು ಬಡಿ ದೋಡಿ ಸಿದ ವೀರನೆಂದರೆ ನೀನೇಸರಿ ಆದರೆ ಮಾತಾಡುವಾಗ ಸ್ವಲ್ಪ ಹಿಂದೆ ಮುಂದೆ ಯೋಚಿಸಿ ಮಾತಾಡು. ಆದುದನ್ನು ಅಷ್ಟು ಬೇಗ ಮರೆಯಬಾರದು,

ಇಂದ್ರ:- ಚಿಕ್ಕಯ್ಯನವರೆ, ಏನು ಯೋಚಿಸಬೇಕಿತ್ತು? ನೀವೇ ಹೇಳಿ. ಹಿಂದೇನು ನಡೆಯಿತು, ಮುಂದೇನು ನಡೆದೀತು?

ಜನಕನ ನಗರದೊಳಾದಪಮಾನವ । ಮನಸಿಗಿಕ್ಕದೆ ಪೋದೆ ನೀನು ॥ ಘನವಾದ ಕಿವಿ ಮೂಗ ಕೊಯ್ಸಿಕೊಂಡಂಥ ಶೂರ್ಪಣಖಿಯೇನಾದಳೆಂದರಿಯೊ ॥೫॥

ವಿಭೀ:- ಇಂದ್ರಜಿತು ನೀವೀಗ ತಂದು ಸೆರೆಯಲ್ಲಿಟ್ಟಿರುವ ಆ ವೈದೇಹಿಯ ಸ್ವಯಂವರ ಕಾಲದಲ್ಲಿ ಈ ನಿನ್ನ ತಂದೆ ಅಲ್ಲಿಗೆ ತೆರಳಿದ ವಿಚಾರ ನೆನಪಿದೆಯಷ್ಟೆ, ವೀರ ಫಣವಾಗಿ ಒಡ್ಡಿದ್ದ ಹರಧನುವನ್ನು ಎತ್ತಲೆಂದು ಹೋಗಿ ಕೈ ಸಾಗದೆ ಧನುವಿನಡಿ ಉರುಳಿ ಬಿದ್ದು, ನೆರೆದ ರಾಜರ ಮುಂದೆ ನಗೆಗೇಡಾದುದನ್ನು ಮರೆತೆಯಾ? ಆ ಧನುವನ್ನೆತ್ತಿ ಮುರಿದು, ಸೀತೆಯನ್ನು ವರಿಸಿದವನ್ಯಾರು? ಮಾಯಾವಿದ್ಯಾ ವಿಶಾರದೆ ನಮ್ಮ ಶೂರ್ಪನಖಿಯ ಕಿವಿ ಮೂಗುಗಳೇನಾದವು? ಯೋಚಿಸಿದೆಯಾ? ಇಷ್ಟೇ ಅಲ್ಲ

ಅಲ್ಪದಾನವರೆ ದೂಷಣ ಖರತ್ರಿಶಿರರು । ಸ್ವಲ್ಪನೆ ಮಾವ ಮಾರೀಚ ॥ ಅಪ್ರಯೋಜಕನಾಗಿ ಕೆಡಬೇಡ ಸೀತೆಯ ನೊಪ್ಪಿಸಿ ಬರುವ ರಾಮನಿಗೆ ॥೬॥

ವಿಭೀ:- ಜನಸ್ಥಾನದಲ್ಲಿ ಹದಿನಾಲ್ಕು ಸಾವಿರ ಸೇನೆಯೊಡನೆ ವಾಸಿಸಿದ್ದ ನಮ್ಮ ಸೇನಾನಿಗಳಾದ ಖರ ದೂಷಣ, ತ್ರಿಶಿರರೇನಾದರು? ಅವರೆಲ್ಲ ಅಲ್ಪ ಬಲರಾಗಿದ್ದರೆ? ನಮ್ಮ ಮಾವ ಮಾರೀಚನ ಯೋಗ್ಯತೆ ಸಾಹಸಗಳಿಗೆ ಸರಿಸಮಾನರಿದ್ದರೆ? ಅವನ ಗತಿಯೇನಾಗಿ ಹೋಯಿತು? ಯಾವ ಪ್ರಯೋ ಜನಕ್ಕಾಗಿ ಯಾವ ರಾಜಕೀಯ ಸಾಧನೆಗಾಗಿ ಪರನಾರಿಯಾದ ಆ ಸೀತೆಯನ್ನು ಕದ್ದು ತಂದಿರಿ? ಯಾವ ಮಹಾ ಸಾಧನೆಗಾಗಿ ಲೋಕನಾಶಕರವಾದ ಈ

ಘೋರ ಸಂಗ್ರಾಮಕ್ಕೆ ಮುಂದಾಗುವಿರಿ? ಕೋಟಿ ಕುಟುಂಬಗಳ ಸುಖ ಶಾಂತಿಗೆ ಮಾರಕರಾಗಬೇಡಿ. ಸಜ್ಜನರ ನಿಂದೆಗೆ ಪಾತ್ರರಾಗಬೇಡಿ. ರಾಮನಿಗೆ ಆತನ ಪತ್ನಿಯನ್ನು ಒಪ್ಪಿಸೋಣ. ನಮ್ಮ ರಾಜ್ಯಕ್ಕೆ ಒದಗಿ ಬಂದ ಆಪತ್ತು ನಿವಾರಿಸೋಣ. ಜಗದ ಮನ್ನಣೆಗೆ ಪಾತ್ರರಾಗೋಣ. ಅಣ್ಣಾ, ನನ್ನ ಹಿತ ವಚನ ಇನ್ನಾದರೂ ಕೇಳು

ನಿನಗೆ ನಾಚಿಕೆಯಾದರೆನಗಾದರರುಹಯ್ಯ | ವನದೊಳಿದ್ದವಳ ಕೊಂಡೊಯ್ದು || ಇನಕುಲಾಧಿಪನಿಗಿತ್ತೀಗ ನಮ್ಮೊಳು ಮನ | ಮುನಿಸಿಲ್ಲದಂತೆ ಮಾಡುವೆನು || ೭ ||

ವಿಭೀ:- ಅಣ್ಣ, ನೀನು ರಾಕ್ಷಸ ಚಕ್ರವರ್ತಿ; ದೇವತೆಗಳು ಕೂಡಾ ನಿನ್ನ ಸೇವಕರು. ಇಂತಹ ಮಹಾ ಗೌರವಶಾಲಿಯಾದ ನಿನಗೆ ಸೀತೆಯನ್ನು ಹಿಂದಕ್ಕೊಪ್ಪಿಸಿ ಶರಣೆಂದು ಬರುವುದು ನಾಚಿಕೆಯೆನಿಸಬಹುದು. ಅದನ್ನು ತಪ್ಪೆಂದು ನಾನೂ ಹೇಳಲಾರೆ. ಆದರೆ ಅದಕ್ಕೊಂದು ಉಪಾಯ ಮಾಡೋಣ. ಸೀತೆಯನ್ನು ಒಪ್ಪಿಸಿ ಬರುವ ಕೆಲಸ ನನಗೊಪ್ಪಿಸು. ಆ ಮಹಾ ಸಾಧ್ವಿಯನ್ನು ಮರ್ಯಾದಾ ಪೂರ್ವಕ ಕೊಂಡೊಯ್ದು ಶ್ರೀರಾಮನಿಗೆ ಒಪ್ಪಿಸಿ, ನಮ್ಮ ಮೇಲೆ ಆತನಿಗೇನೂ ವೈರಭಾವ ವಿಲ್ಲದಂತೆ ಮಾಡಿ, ಅವನ ದಯೆ ಸಂಪಾದಿಸಿ ಕೊಂಡು ಬರುತ್ತೇನೆ. ಕೊಡು ನನಗೆ ಅಪ್ಪಣೆ.

ರಾವಣ:- ಏನೆಂದೆ? ಆ ಕಾಡು ಕಪಿಗಳಿಗೆ ಹೆದರಿ ಸೀತೆಯನ್ನು ಬಿಟ್ಟು ಕೊಡಬೇಕೆ?

ಒಟ್ಟಾದ ಕಪಿಗಳು ಮೃಗವೆಂದು ನಂಬಿನೀ | ಕೆಟ್ಟೆ ನಾ ಸಾರಿ ಹೇಳುವೆನು || ಕಟ್ಟಾಳುತನವಿದು ಸಮಯ ಜಾನಕಿಯನ್ನು | ಕೊಟ್ಟು ಬಾ ರಾಮಚಂದ್ರನಿಗೆ|| ೦ ||

ವಿಭೀ:- ಅಣ್ಣಾ, ಅಲ್ಲಿಯೇ ನೀನು ತಪ್ಪಿರುವುದು. ರಾಮನ ಸೇನಾಸಂದೋಹವನ್ನು ಕಾಡಕಪಿಗಳೆಂದು ಭಾವಿಸಿರುವುದೇ ತಪ್ಪು. ಈ ಹಿಂದೆ ನೀನು ಬ್ರಹ್ಮದೇವನ ತಪಃಮಾಡಿ ಪಡೆದಿರುವ ವರಗಳನ್ನು ಜ್ಞಾಪಿಸಿಕೊ. ದೇವ ದಾನವ ನಾಗ, ಗರುಡ ಸಿದ್ಧ ಸಾಧ್ಯರೇ ಮೊದಲಾದವರಿಂದ ಮರಣ ವಿಲ್ಲದಂತೆ ವರನೀಡು; ನರ, ವಾನರರು, ನನಗೆ ಪಾಡಲ್ಲ ವೆಂದಿದ್ದೆಯಲ್ಲ. ಇಂದೀಗ ಬಂದವರು ನರ, ವಾನರರು. ನಿನ್ನ ವಧೆಗಾಗಿಯೇ ಭಗವಂತನು ನರನಾಗಿ, ದೇವತೆಗಳು ವಾನರರಾಗಿ ಬಂದಿರುವರು. ಹಿಂದೆ ಕೈಲಾಸದಲ್ಲಿ ನಂದೀಶ್ವರನಿಂದ ನಿನಗೊದಗಿದ

ಶಾಪವನ್ನು ನೆನಸಿಕೊ. ನನ್ನಂತೆ ಮುಸುಡುಳ್ಳ ವಾನರರಿಂದ ನಿನಗೆ ಸೋಲುಂಟಾಗಲಿ ಎಂದಲ್ಲವೆ ಅವನ ಶಾಪ! ಹಾಗಿರುವಾಗ ರಾಮ ಮತ್ತು ವಾನರರೊಡನೆ ಕದನವಾದರೆ, ಖಂಡಿತವಾಗಿ ಜಯದಾಸೆ ಬೇಡ. ಮಕ್ಕಳುಮರಿಗಳು ಸಹಿತ ಬಾಳಬೇಕೆಂದಿದ್ದರೆ, ಇದೇ ಸಕಾಲ; ಸುಕಾಲ. ಈಗಲೇ ಸೀತೆಯನ್ನು ರಾಮಚಂದ್ರನಿಗೆ ಒಪ್ಪಿಸಿ ಬಿಡುವುದೊಳ್ಳಿತು.

ಪರನಾರಿಗಳುಪಿದ ಪಾಪಿಗಳನು ಭೂಮಿ! ಹೊರಳೆಂಬುದಿದು ವೇದ ವಚನ|| ನರಕದೊಳಿಳುಹುವರಲ್ಲಿ ನಮ್ಮವನು ನೀನರಿತು ಜಾನಕಿಯನ್ನು ಕಳುಹೊ ..೯||

ವಿಭೀ:- ಅಗ್ರಜ, ದೇವವಾಣಿಯೆನಿಸಿದ ವೇದವೇನು ಹೇಳುತ್ತಿದೆ " ಧರ್ಮೋ ರಕ್ಷತಿ ರಕ್ಷಿತ " ಎಂದಲ್ಲವೇ? ಸೀತಾಪಹಾರ ಯಾವ ನ್ಯಾಯ? ಪರನಾರೀ ಚೋರನನ್ನು ಯಾವ ಧರ್ಮ, ಯಾವ ದೇವರು ಕಾಪಾಡುವರು ಹೇಳು. ಅಂತಹ ಪಾಪಿಯನ್ನು ಭೂಮಿ ಹೊರಲಾರನು. ಇಹದಲ್ಲಿ ಅಪಕೀರ್ತಿ; ಪರದಲ್ಲಿ ನರಕಭೀತಿ. ಹೀಗೆ ಇಹಪರ ಕೆಡಿಸಿಕೊಂಡು ಬಾಳಿದರೆ ಅದು ಬಾಳಲ್ಲ; ಬರೇಹಾಳು. ಸಾರಿ ಹೇಳುತ್ತೇನೆ. ಇದನ್ನೆಲ್ಲ ಯೋಚಿಸು. ಜಾನಕಿಯನ್ನು ಆ ನರೇಂದ್ರನಿಗೆ ಒಪ್ಪಿಸು.

ಭಾಮಿನಿ

ಸಾಕು ಸಾಕೀ ಸಭೆಯೊಳಗೆ ಕುಳಿ । ತೀ ಕುಟಿಲತನವೆಂಬ ಕಪಿಗ್ರಹ । ಸೋಕಿತೀ ಚಂಡಾಲ ಹೇಡಿಯ ನೂಕಿರೆಂದೆನಲು ||

ರಾವಣಃ- ಎಲವೊ ಖೂಳ, ಮುಠ್ಠಾಳ, ಸಾಕು ಮಾಡು ನಿನ್ನ ಹಾಳು ವೇದಾಂತ. ದೇವ ದುರ್ಲಭವಾದೀ ಘನ ಸಭಾಂತರಾಳದಲ್ಲಿ ಈ ರೀತಿ ಬಗುಳುವ ನಿನ್ನ ನಾಲಗೆಯನ್ನು ಸೀಳಿದರೆ ತಪ್ಪೇನು? ಈ ಕುಹಕತನವನ್ನೆಲ್ಲಿ ಕಲಿತೆ? ನಿನ್ನ ಪಾಲಿಗೆ ಕಾಡಿನ ಕಪಿಗಳು ದೇವತೆಗಳಾದವೆ? ನರನೊಬ್ಬ ಪರಮಾತ್ಮನಾದನೆ? ಅವರದೆಲ್ಲ ಅವತಾರವಾದರೆ ನಿನ್ನದೂ ಒಂದು ಅವತಾರ. ವೈರಿಭಯಜ್ವರ ಪೀಡಿತನಿಗೆ ನೊಣ ನುಸಿಗಳೂ ಅವತಾರ. ಯಾರಲ್ಲಿ, ಈ ಕಡುಹೇಡಿ, ಮನೆಹಾಳ ಚಂಡಾಲನನ್ನು ಕತ್ತಿಗೆ ಕರವಿಕ್ಕಿ ಹೊರದಬ್ಬಿರಿ. ಪಾಪಿ!

ನೂಕಲೇತಕೆ ಚರರು ನಾವೇ । ನೂಕಿಕೊಂಬೆವೆನುತ್ತ ಕಂಗಳ । ತಾಕಿದು ದಕದ ಶರಣ ಬಂದನು ಮಾತೆಯಿದ್ದೆಡೆಗೆ ||

ವಿಭೀ:- ಅಹಾ! ಇಷ್ಟಕ್ಕೂ ಬಂತೇ ? ಕೆಡುವ ಕಾಲಕ್ಕೆ ಬುದ್ಧಿ ಇಲ್ಲ: ಮಡಿವ

ಕಾಲಕ್ಕೆ ಮದ್ದಿಲ್ಲ ಎಂಬ ಮಾತು ಸತ್ಯವಾಯಿತು ರೋಗಿಗೆ ಔಷಧ ಪಥ್ಯವಾಗಲಾರದು. ಇನ್ನೇಕೆ ಇಲ್ಲಿ ವಾಗ್ವಾದ. ಮೂರ್ಖರ ಮನಸ್ಸೆಂಬ ಗೋರ್ಕಲ್ಲ ಮೇಲೆ ನೀತಿಯೆಂಬ ಮಳೆ ನೂರ್ಕಾಲ ಸುರಿಸರೂ ಆ ಕಲ್ಲು ನೀರ್ಕುಡಿಯಲಾರದು. ನನ್ನನ್ಯಾರೂ ನೂಕುವ ಪ್ರಯಾಸ ಪಡಬೇಕಾಗಿಲ್ಲ; ನಮ್ಮನ್ನು ನಾವೇ ನೂಕಿಕೊಳ್ಳುವೆವು. ಅಯ್ಯೋ, ಒಡಹುಟ್ಟಿದ ಅಣ್ಣನಿಗೊದಗುವ ಅನಾಹುತವನ್ನು ಕಾಣುವ ದುರ್ವಿಧಿಯೊದಗಿತಲ್ಲ! ಒಡಹುಟ್ಟು ಎಂಬ ಕರುಳತೊಡಕು ಹೃದಯ ಸುಡುತ್ತಿದೆ. ಅದಕ್ಕೂ ಮೊದಲು ಮಡಿವೆನೆಂದರೆ ಮರಣವೆನಗಿಲ್ಲ. ಅಯ್ಯೋ ಏನು ಮಾಡಲಿ? ತಮ್ಮನ ಮಾತು ಕೇಳದಿದ್ದರೆ ಅಮ್ಮನ ಮಾತೂ ಕೇಳಲಾರನೇ? ಮಾತೆಯ ಬಳಿಗೆ ಹೋಗಿ, ಆಕೆಯಿಂದಲಾದರೂ ಅಣ್ಣನಿಗೆ ನೀತಿ ಹೇಳಿಸುವೆನು.

ಇದೇ ತಾಯಿಯ ಮಂದಿರ. ಒಳ ಹೋಗಿ ವಂದಿಸುತ್ತೇನೆ. ಅಮ್ಮಾ ಅಮ್ಮಾ ಅಡಿದಾವರೆಗಳಿಗೆ ವಂದನೆಗಳು.

ಕೈಕಸಿ:- ಮಗನೆ, ಎದ್ದೇಳು ಕಂದ, ಇದೇನು ಸದಾ ಪ್ರಫುಲ್ಲಿತವಾಗಿರುವ ನಿನ್ನ ಮೊಗದಾವರೆ ಕಂದಿದಂತಿದೆಯಲ್ಲ. ಏನಾಯಿತು ಕಂದ?

ರಾಗ–ಸಾಂಗತ್ಯ-ರೂಪಕ.

ಅಮ್ಮ ಕೇಳಣ್ಣನ ದೆಸೆಯಿಂದಲೀ ವಂಶ । ನಿರ್ಮೂಲವಹ ಕಾಲ ಬಂತು॥
ಸುಮ್ಮನೆ ಮಧುಬಿಂದು ಕಲಹ ಬೇಡೆಂದರೆ । ಧರ್ಮಕ್ಕೆ ಮನಸ್ಸೊಡಂಬಡದು॥೧॥

ವಿಭೀ:-- ತಾಯೆ ನಮ್ಮಣ್ಣನಿಂದು ದಾನವ ಚಕ್ರೇಶ್ವರ. ಆತನ ಪ್ರತಿಯೊಂದು ಹೆಜ್ಜೆಯೂ ಅಸುರ ಕುಲದ ಆಗುಹೋಗುಗಳಿಗೆ ಕಾರಣವಾಗುವುದು. ಇದ್ದುವರೆಗೆ ನಮ್ಮ ವಂಶೋನ್ನತಿ ಸಾಧಿಸಿದ ಆತನಿಂದ ಈಗ ವಂಶನಿರ್ಮೂಲವಾಗುವ ಕಾಲ ಬಂದಿದೆ. ವಿಚಾರಶೀಲನಾದ ಆತನಿಂದು ಅವಿವೇಕಿಯಾಗಿದ್ದಾನೆ. ಮಧುಬಿಂದು ಕಲಹವೆಂಬಂತೆ ಸಮೂಲವಾಗಿ ನಾಶವಾಗುವುದು ಬೇಡವೆಂದು ಹೇಳಿದರೆ ಕೇಳಲಾರ. ಅನ್ಯಾಯ, ಅಧರ್ಮ, ಅಕೃತ್ಯ ಮಾಡಬೇಡವೆಂದರೆ ಆತನ ಮನಸ್ಸು ಒಡಂಬಡಲಿಲ್ಲ.

ಸಾಕ್ಷಾತ್ ಹರಿ ರಾಮಚಂದ್ರ ಜಾನಕಿ ಮಹಾ । ಲಕ್ಷ್ಮಿ ದೇವಿಯೆಂದರಿತು ॥ ರಾಕ್ಷಸಾರಿಯ ಕೂಡೆ ಕಲಹ ಬೇಡೆಂದರುಪೇಕ್ಷಿಸಿ ಕಳೆದ ಮಾತುಗಳ॥೨॥

ವಿಭೀ:- ಜನನೀ, "ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣೀಭೂತನಾಗಿರುವ

ಶ್ರೀಹರಿಯೇ ಶ್ರೀರಾಮಚಂದ್ರನು; ಆ ಸೀತಾದೇವಿಯೇ ಸಾಕ್ಷಾತ್ ಲಕ್ಷ್ಮಿಯಾಗಿರುವಳು. ಹೀಗಿರುವಾಗ " ರಕ್ಕಸಾರಿಯ ಕೂಡೆ ವೈರ ಸಲ್ಲದು; ಇವರಿಂದ ಸರ್ವನಾಶ ವಾಗುವುದು ಎಂದು ಬಗೆ ಬಗೆಯಿಂದ ಹೇಳಿದೆ; ಕೈಮುಗಿದು ಬೇಡಿದೆ. ನನ್ನ ಮಾತು ಆತನಿಗೆ ರುಚಿಸಲಿಲ್ಲ. ಉಪೇಕ್ಷಿಸಿದ, ತಿರಸ್ಕರಿಸಿದ; ಸಭೆಯಿಂದ ನೂಕಿಸಿದ.

ನಗರವ ಸುಟ್ಟಂಥ ವೊಗವುಳ್ಳ ಕಪಿಗಳು । ಅಗಣಿತವಾಗಿ ಬಂದಿಹವು ||
ಜಗದ ದೈವದ ಕೂಡೆ ಪಂಥ ಬೇಡೆಂದರೆ | ಜಗಳಕೊಡ್ಡಿಹನು ಮಾರ್ಬಲವ ||೨||

ವಿಭೀಃ- ಅಮ್ಮ, ನಮ್ಮಾ ನಗರವನ್ನು ಸುಟ್ಟು ಸೂರೆ ಮಾಡಿದ ಆ ಕಪಿಯಂತಹ ಕಪಿಗಳು ಲಕ್ಷಸಂಖ್ಯೆಯಲ್ಲಿ ಬಂದಿವೆ-ಒಂದು ಕಪಿಯ ಮುಂದೆ ಇಷ್ಟೊಂದು ರಕ್ಕಸರ ಆಟ ನಡೆಯಲಿಲ್ಲ-ಈಗ ಬಂದಿರುವ ಕೋಟಿ ಕೋಟಿ ವಾನರರ ಮುಂದೆ ಏನು ನಡೆದೀತು ತಾಯಿ. ವಾನರಗೀಬಲುಹು ದೇವರ ಒಲುಮೆಯಿಂದಲ್ಲದೆ, ಅನ್ಯಥಾ ಬರಲಾರದು. ಇಷ್ಟನ್ನೂ ಯೋಚಿಸುವದಿಲ್ಲ. ಜಗದ ದೈವದ ಮುಂದೆ ಪಂಥ ಪೌರುಷ ಬೇಡವೆಂದರೆ ಕೇಳದೆ, ನಮ್ಮ ಅಭ್ಯುದಯಕ್ಕಾಗಿ ದುಡಿದ ಸ್ವಾಮಿನಿಷ್ಠ ಸೇವಕರ ಸಮೂಹವನ್ನೆ ರಣಚಂಡಿಗೆ ಬಲಿಕೊಡಲು ನಿರ್ಧರಿಸಿದ್ದಾನೆ.

ಇದಿರಾಗಿ ರಾಮನ ಬಾಣದಲಿ ಸಾವುದರಿಂದ । ಮೊದಲಾಗಿ ಪೋಪೆ ರಾಘವನ || ಪದ ಕಮಲವ ಸೇರಿ । ಪಡೆದು ಕಾರುಣ್ಯವ | ಬದುಕುವೆ ಪಾಲಿಸಪ್ಪಣೆಯ || ೪ ||

ವಿಭೀಃ–ಜನನಿ, ಜಗದಧಿದೇವನಾದ ಶ್ರೀರಾಮನಲ್ಲಿ ವಿರೋಧ ಬೆಳೆಸಿ, ಆವನ ಆಗ್ರಹಕ್ಕೆ ತುತ್ತಾಗಿ ಸಾಯುವುದರ ಬದಲು, ಅನುಗ್ರಹ ಪಡೆದು ಬಾಳುವುದು ವಿಹಿತವಲ್ಲವೇ ? ತಾಯಿ, ಅಣ್ಣನ ಆಸ್ಥಾನದಲ್ಲಿ ದೊರೆತ ಅಪಮಾನದಿಂದ ನೊಂದು, ಅಣ್ಣನಿಗೊದಗುವ ದುರಂತವನ್ನೆಣಿಸಿ ಬೆಂದು, ಕರಗುತ್ತಿರುವ ಹೃದಯವನ್ನು ಹೊತ್ತು ರಾಘವನ ಬಳಿಗೆ ಹೋಗುತ್ತೇನೆ. ಶ್ರೀ ರಾಮಚಂದ್ರನ ಕರುಣಾಮೃತ ಸೇಚನೆಯಿಂದಲಾದರೂ ಹೃದಯಕ್ಕೆ ಶಾಂತಿಯೊದಗುವುದೋ ನೋಡುತ್ತೇನೆ. ಅಲ್ಲಿಯೂ ಆಶ್ರಯ ದೊರಕದಿದ್ದರೆ ದೇಶಾಂತರ ಹೋಗುತ್ತೇನೆ. ಅಮ್ಮಾ, ಅಪ್ಪಣೆ ಕೊಡು; ಆಶೀರ್ವಾದ ನೀಡು. ಅದೇ ನನಗೆ ಎಂದೆಂದಿಗೂ ಶ್ರೀರಕ್ಷೆಯಾಗಿರಲಿ.

ಇಂತೆಂಬ ಮಗನ ವಾಕ್ಯವ ಕೇಳಿ ಕೈಕಸೆ। ಸಂತಾಪದೊಡಲೊಲ್ಪುದಿಮ ||
ಅಂತರಂಗದಿ ಬಂದು ದಶಕಂಠನಿದಿರೊಳು। ನಿಂತುಕೊಂಡಳಬಲೆ ಪೇಳಿದಳು ||೫||

ಕೈಕಸೆ- ಅಯ್ಯೋ, ಇದೇನು ಬಂತು ಗ್ರಹಚಾರ! ಇದೆಂಥ ಆಪತ್ತು! ಹಿರಿಯ ಮಗನ ಅಹಂಕಾರ; ಕಿರಿಯ ಮಗನ ದೇಶಾಂತರ! ನನ್ನ ಹೃದಯಕ್ಕೆ ಅವಾಂತರ! ವಿಭೀಷಣನ ನುಡಿಕೇಳುವಾಗ ಕರುಳು ಕರುಗುತ್ತಿದೆ. ಮನಸ್ಸು ಮರುಗುತ್ತಿದೆ. ಮುಂದೊದಗಬಹುದಾದ ದುರಂತವನ್ನೆಣಿಸಿದರೆ, ಹೃದಯದಲ್ಲಿ ಸಂತಾಪವೆಂಬ ಅಗ್ನಿ ಪ್ರಜ್ವಲಿಸುತ್ತಿದೆ ಇದನ್ನೀಗಲೇ ನಿವಾರಿಸದಿದ್ದರೆ ಮುಂದೆ ಸರ್ವನಾಶ ಖಂಡಿತ. ರಾವಣನ ಬಳಿಗೆ ಈಗಲೇ ತೆರಳುತ್ತೇನೆ.

ರಾಗ-ಶಂಕರಾಭರಣ-ತ್ರಿವುಡೆ

ಕಂದ ನಿನಗೀ ಕುಟಿಲತನಗಳು ಬಂದುದೇಕೈ ಸೀತೆಯ ॥ ತಂದು ಕುಲ ಕಪಕೀರ್ತಿ ನಮ್ಮನು। ಹೊಂದಿದುದಕೆ ॥ ೧ ॥

ಕೈಕಸೆ:- ಮಗನೆ, ಇದೇನು ಮಾಡಿದೆ? ನಿನಗೇಕೀ ದುರ್ಬುದ್ಧಿ ಯೊದಗಿತು? ನಿನಗೀ ಪ್ರಾಯದಲ್ಲಿ ಸ್ತ್ರೀವ್ಯಾಮೋಹವೇ? ಬೇರೊಬ್ಬನ ಧರ್ಮಪತ್ನಿಯನ್ನು ಅಪಹರಿಸುವುದು ಯಾವ ಧರ್ಮ? ಅದೂ ನಿನ್ನಂತಹ ವೀರಾಧಿವೀರನಿಗೆ ಈ ರೀತಿಯ ವಂಚನೆಯ ಅಪಹಾರ ಭೂಷಣವೇ? ಕುಲಕ್ಕೆ ಸಲ್ಲದ ಕಾರ್ಯ ನಡೆಸಿ, ನಮ್ಮ ವಂಶದ ಘನತೆಯನ್ನು ಅಪಕೀರ್ತಿಯ ನರಕ ಕೂಪದಲ್ಲಿ ಮುಳುಗಿಸಿದೆ ಅಯ್ಯೋ ನೀನು ಮಾಡಿದ ಕಾರ್ಯವೇ?

ಬಿಟ್ಟು ಕೊಡು ಜಾನಕಿಯನೆಂದರೆ ಸಿಟ್ಟು ಮಾಡೀ ತಮ್ಮನ ||
ಕಷ್ಟದಲಿ ಕಳುಹುವರೆ ಸಾವಿನ್ನೆಷ್ಟು ದಿವಸ ॥ ೨ ॥

ಕೈಕಸೆ:- ಕಂದ, ಮಾಡಬಾರದ ಕಾರ್ಯವನ್ನೇನೊ ಮಾಡಿದೆ. ಆದಗ್ಗೂ ಮಾಡಿದ ಈ ತಪ್ಪನ್ನು ಒಪ್ಪಿಕೊಂಡು, ತಿದ್ದಿಕೊಳ್ಳುವುದು ಜಾಣರ ಲಕ್ಷಣ ನಿನ್ನ ತಮ್ಮ ನಮ್ಮೆಲ್ಲರ ಹಿತ ಬಯಸಿ, ನೀತಿ ಹೇಳಿದರೆ, ಅವನ ಮೇಲೆ ಸಿಟ್ಟು ಮಾಡಿದೆಯಾ? ಬೈದು ಹೊರಹಾಕಿದೆಯಾ? ಅಯ್ಯೋ ಮಗನೆ, ತಾಯಿಯಾದ ನಾನಿರುವಷ್ಟು ದಿನವಾದರೂ ನೀವು ಅನ್ಯೋನ್ಯರಾಗಿರಬೇಕೆಂಬುದೇ ನನ್ನಾಶೆ ನನ್ನ ಈ ಮಹದಾಶೆಯನ್ನು ಮಣ್ಣುಗೂಡಿಸಿ ಹೆತ್ತ ಹೊಟ್ಟೆಗೆ ಸುಣ್ಣ ಹೊಯ್ಯುವೆಯಾ?

ರಾವಣ:-ತಾಯಿ, ನಾನು ಮಾಡಿದ ಅಂತಹ ಅನ್ಯಾಯ ಯಾವುದು?

ಪರ ಸತಿಯನು ಬಯಸುವಾತನೆ ಭಾಗ್ಯಹೀನನು ದೈವದ ‖ ಕರುಣ ತಪ್ಪದೆ ನಾಣದಹಿತರ | ಹೊರಳು ಭೂವಿ ॥ ೩ ||

ಕೈಕಸೆ:-- ವತ್ಸಾ. ಪರರ ಪತ್ನಿಯನ್ನು ಬಯಸುವಾತನು ಭಾಗ್ಯಹೀನನು; ಅರ್ಥಾತ್ ಆತನ ಸಮಸ್ತ ಭಾಗ್ಯಗಳೂ ನಾಶವಾಗುವುವು. ಆತನ ಮೇಲಿದ್ದ ದೈವದ ದಯೆ ಮಾಯವಾಗುವುದು. ದೇವರ ದೃಷ್ಟಿಯಲ್ಲಿ ಅಧರ್ಮಿಯಾದ ಆತನು ಮಹಾಪಾಪಿಯೆನಿಸುವನು. ಅಂತಹ ಮಹಾಪಾಪಿಯನ್ನು ಈ ಭೂಮಿ ತಾಯಿ ಹೊರಲಾರಳು.

ರಾವಣ:- ಜನನೀ, ಹಾಗಾದರೆ ನೀನು ಹೇಳುವುದೇನು?

ಬಾಹದಕೆ ಮೊದಲಾಗಿ ಸೀತೆಯ । ಕಳುಹಿಕೊಟ್ಟು ರಾಮನ ‖ ಸ್ನೇಹವಲಿ ಸುಖಬಾಳು ತಮ್ಮನ । ಕೂಡಿಕೊಂಡು ||೪ ‖

ಕೈಕಸೆ:- ಮಗನೇ, ತಾಗಿ ಬಾಗುವ ಮುನ್ನ ಬಾಗಿ ನಡೆವುದೆ ಲೇಸು ಎಂಬದೆ ಜಾಣರ ನುಡಿಯನ್ನು ನೆನೆಸಿಕೊ. ಲೋಕೋತ್ತರ ಮಹಾಪುರುಷನಾಗಿ, ದೇವರ ಅವತಾರವೆಂದು ಹೇಳಿಸಿಕೊಂಡ ಶ್ರೀರಾಮನು ಬಂದು, ನಮ್ಮೆಲ್ಲರನ್ನು ಕೊಂದು ಸೀತೆಯನ್ನು ಕೊಂಡೊಯ್ಯುವ ಮೊದಲೇ ಸೀತೆಯನ್ನು ಸೆರೆಬಿಡು. ರಾಮನಲ್ಲಿಗೆ ಕಳುಹಿಕೊಡು. ಶ್ರೀರಾಮಚಂದ್ರನ ಸ್ನೇಹ ಸಂಪಾದಿಸು. ಲಂಕಾ ರಾಜ್ಯವನ್ನು ಉಳಿಸು. ವಿಭೀಷಣನನ್ನು ಒಡಗೂಡಿ ಮೊದಲಿನಂತೆ ಸುಖವಾಗಿ ಬಾಳು.

ವಾರ್ಧಕ

ಕ್ಷಿತಿಜೆಯನು ಬಿಡವೇಳ್ದ ತನ್ನ | ಜನನಿಯ ನುಡಿಗೆ । ಖತಿಗೊಳಲ್ಕಿತ್ತ ಪೂರ್ವದ ಮಂತ್ರಿಗಳು ಸಹಿತ | ರಥವೇರಿ ಮುಂದಪ್ಪ ಕಾರಣಂಗಳ ತಿಳಿದ ವರ ವಿಭೀಷಣ ದೇವನು ||

ರಾವಣ:-- ಅಮ್ಮ, ನಾನು ಕಾಮಾಭಿಲಾಷೆಯಿಂದ ಸೀತೆಯನ್ನು ತಂದಿರುವೆನೆಂಬ ನಿಮ್ಮ ಭಾವನೆ ಸರಿಯಲ್ಲ. ನಮ್ಮ ರಾಜಕಾರಣವೆಂತಹುದು, ನಮ್ಮ ಕುಲದ ಹಾಗೂ ಸಾಮ್ರಾಜ್ಯದ ಮಾನ ಗೌರವ ಎಂತಹುದು. ಅದಕ್ಕಿಂದು ಯಾವ ಧಕ್ಕೆಯೊದಗಿದೆಯೆಂಬುದನ್ನು ಅರ್ಥಮಾಡಿಕೊಳ್ಳಲಾರದ ನಿಮ್ಮಲ್ಲಿ ಹೇಳಿಯೂ ಫಲವಿಲ್ಲ. ನಮ್ಮ ದೃಷ್ಟಿಯಲ್ಲಿ, ಪ್ರಾಣಕ್ಕಿಂತ ಮಾನ ಹೆಚ್ಚು, ನಿಮ್ಮ ಮಗ ವಿಭೀಷಣನ ದೃಷ್ಟಿಯಲ್ಲಿ ಮಾನಕ್ಕಿಂತ ಪ್ರಾಣ ಹೆಚ್ಚು. ಜೀವ ವಿದ್ದರೆ ಜೇಡಿಯಾದರೂ ತಿಂದು ಬದುಕಬೇಕೆಂಬ ಹೇಡಿಯವ. ನಾನುಥವನಲ್ಲ;

ಸತ್ತರೂ ಮಾನ ಗೌರವ ಹೊತ್ತು ವೀರನಾಗಿ ಸಾಯುವೆನು. ಅವನಂತೆ ಬದುಕಿ ಸಾಯುವುದಿಲ್ಲ; ಅಂದರೆ ಮಾನಗೆಟ್ಟು ಸತ್ತ ಹೆಣದಂತೆ ಬದುಕುವುದಿಲ್ಲ. ತಾಯಿ, ನನ್ನ ತಂಗಿ, ಅಲ್ಲಿ ನಿಮ್ಮ ಮಗಳು ಶೂರ್ಪನಖಿಯ ಕಿವಿ ಮೂಗು ಕತ್ತರಿಸಿದ್ದು ರಾಮ ಮೊದಲು. ನಾನು ಸೀತೆಯನ್ನು ತಂದುದು ನಂತರ. ಮೊದಲ ಅಪರಾಧಿ ರಾಮ. ರಾಮನಿಗೆ ಸೀತೆ ಬೇಕಾದರೆ ನನ್ನ ಬಳಿಗೆ ರಾಮ ಬರಲಿ, ನನ್ನ ಮುಂದೆ- ಬೇಡ- ನಿಮ್ಮ ಮುಂದೆ ಕೈಜೋಡಿಸಿ, " ಶೂರ್ಪನಖಿಯ ಮಾನ ಖಂಡನೆ ಮಾಡಿದ್ದು ತಪ್ಪಾಯಿತು. ತಪ್ಪನ್ನು ಕ್ಷಮಿಸಿ ತನ್ನ ಹೆಂಡತಿ ಸೀತೆಯನ್ನು ಕೊಡು" ಎಂದು ಕೇಳಲಿ. ರಾಮನನ್ನು ಕ್ಷಮಿಸುತ್ತೇನೆ. ಸೀತೆಯನ್ನು ರಾಮನಿಗೆ ಒಪ್ಪಿಸುತ್ತೇನೆ. ಹಾಗೆ ಮಾಡದೆ ಕಾಡ ಮಂಗಗಳ ದಂಡು ತಂದು ಸಮುದ್ರದಾಚೆ ನಿಂದ ಮಾತ್ರಕ್ಕೆ ಬೆದರಿ, ಸೀತೆಯನ್ನು ಕೊಂಡುಹೋಗಿ ಒಪ್ಪಿಸುವ ಭಂಡ ನಾನಲ್ಲ. ಗುಣಕ್ಕೆ ತಗ್ಗಿಯೇನು, ಬಗ್ಗಿಯೇನು; ಬಲದಿಂದ ಬಗ್ಗಿಸಲೆತ್ನಿಸಿದರೆ ತುಂಡಾದೇನೇ ಹೊರತು ಬಗ್ಗ ಬಾಳಲಾರೆ. ನಮ್ಮ ಸಾಮ್ರಾಜ್ಯದ ಮಾನ ಮಾರಲಾರೆ. ತೆರಳಿರಿ ಅಂತಃಪುರಕ್ಕೆ.

ವಿಭೀಷಣಃ- ಅಣ್ಣನ ಬಳಿಗೆ ತೆರಳಿದ್ದ ಮಾತೆ ಬಂದು ಕಣ್ಣೀರಿಳಿಸುತ್ತ ನಡೆದ ವಿಚಾರ ತಿಳಿಸಿದ್ದಾಳೆ. ಶ್ರೀರಾಮನ ಬಳಿಗೆ ಹೋಗೆಂದು ಹರಸಿ ಬೀಳ್ಕೊಟ್ಟಿದ್ದಾಳೆ. ತಡವೇಕೆ, ಅನಿಲ, ಅನಲ, ಹರ ಸಂಪಾತಿಗಳೆಂಬ ನನ್ನ ನಾಲ್ವರು ಆಪ್ತಮಂತ್ರಿಗಳೊಂದಿಗೆ ರಥವೇರಿ ಶ್ರೀರಾಮಚಂದ್ರನ ಬಳಿಗೆ ತೆರಳುತ್ತೇನೆ.

ಪಥವಿಡಿದು ಭಾನುಮಾರ್ಗದೊಳು ಬರಲಗ್ರಜನ । ಜತೆಯ ಬಿಡಲಾರದಣ್ಣನ ದೂರದಿಂ ಕರೆವು । ತತಿ ವಿವೇಕದ ನುಡಿಯ ಕಡೆಗೊಂದನೆಂಬೆ ಕೋಪಿತನಾದಡಾಗಲೆಂದು ॥ ೧ ॥

ವಿಭೀಃ-- ರಥವನ್ನಂತೂ ಏರಿದೆ; ಭಾನುಮಾರ್ಗವನ್ನು ಹಿಡಿದೆ. ಮುಂದೆ ಸಾಗುತ್ತಿದ್ದಂತೆ ಒಡಹುಟ್ಟಿದ ಕರುಳು ಹಿಂದಕ್ಕೆ ಸೆಳೆಯುತ್ತಿದೆ. ಜನ್ಮಾರಭ್ಯ ಜತೆವಿಡಿದು. ಬೆಳೆದು ಬಾಳಿದವರು ನಾವು. ಈ ಮಧುಬಿಂದು ಕಲಹದಿಂದಾಗಿ ನಾವಿಂದು ಪರಸ್ಪರ ವಿರೋಧಿಗಳಾಗಬೇಕಾಯಿತೇ? ಹಾಯ್,

ಎಂತಹ ದುರ್ದೆಸೆ ಪ್ರಾಪ್ತವಾಯಿತು. ಇನ್ನೊಮ್ಮೆ ಅಣ್ಣನಿಗೆ ಎರಡು ಮಾತು ಹೇಳಿ ನೋಡುತ್ತೇನೆ.

ರಾಗ-ಸೌರಾಷ್ಟ್ರ-- ತ್ರಿವುಡೆ

ಕಂಡುದ ನುಡಿದರೆ ಕೋಪವೆಗ್ಗಳಿಸುವು । ದಣ್ಣದೇವ ‖ ತನ್ನ । ಮಂಡೆ ಗಟ್ಟಿಯೆನುತಲಿ ಶಿಲೆಗೆ ಜಪ್ಪುವುದುಂಟೆ । ಅಣ್ಣದೇವ ‖ ೧ ‖

ವಿಭೀಃ–ಅಣ್ಣಾ, ಕಂಡುದನ್ನು ಕಂಡಂತೆ ಆಡಿದರೆ ಕೆಂಡದಂತೆ ಕೋಪ ಎಂಬ ಮಾತು ನಿಜವಾಯಿತು. ನಿನ್ನ ಹಿತಾರ್ಥವಾಗಿ ಆಡಿದ ನನ್ನ ಯಥಾರ್ಥಭಾವನೆಯನ್ನು ಅಪಾರ್ಥ ಮಾಡಿಕೊಂಡು ವ್ಯರ್ಥರೇಗುವುದೇಕೆ? ನೀನೇನೂ ತಿಳಿಯದವನಲ್ಲ; ನಿನ್ನಲ್ಲಿ ಶಕ್ತಿಸಾಮರ್ಥ್ಯ, ಧನ, ಅಧಿಕಾರ ಮಾರ್ಬಲ ಎಲ್ಲವೂ ಇದೆ ಸತ್ಯ. ಹಾಗೆಂದು ಧರ್ಮಕ್ಕೆರವಾಗಿ ದೈವದ ಮುಂದೆ ಸೆಣಸಾಟವೇ? ಯಾರಾದರೂ ತಲೆ ಗಟ್ಟಿದೆಯಿಯೆಂದು ಶಿಲೆಗೆ ಬಡಿದುಕೊಳ್ಳುವುದುಂಟೆ?

ರೋಗಿಗೆ ಮದ್ದು ಬಾಯಿಗೆ ಸೊಗಸಪ್ಪುದೆ । ಅಣ್ಣದೇವ ‖ ನಿನಗೀಗೆನ್ನ ನುಡಿ ವಿಷವಾಗಿ ಸಂಭವಿಸಿತೆ । ಅಣ್ಣದೇವ ‖೨‖

ವಿಭೀ:– ಅಣ್ಣ, ರೋಗಿಯ ಬಾಯಿಗೆ ಔಷಧ ರುಚಿಸಲಾರದು. ಆದರೂ ರೋಗದ ಸ್ಥಿತಿ ತಿಳಿದ ವೈದ್ಯ ಔಷಧ ಕೊಡಬೇಕಾದುದು ಧರ್ಮ. ಅಂತೆಯೇ ಭವಿಷ್ಯದಲ್ಲಿ ಒದಗಬಹುದಾದ ಅಪಾಯವನ್ನೆಣಿಸಿ ನಿನಗೆ ನೀತಿಹೇಳಿದರೆ ಅದು ಪಥ್ಯವಾಗದೆ ಹೋಯಿತಲ್ಲ ! ಇದು ನಿನ್ನ ದುರದೃಷ್ಟ.

ದಾಶರಥಿಯ ಕೂಡೆ ಕಲಹ ಬೇಡೆಂದರೆ | ಅಣ್ಣದೇವ ‖ವಿ| ನಾಶ ಕಾಲಕೆ ಬುದ್ಧಿ ವಿಪರೀತವಾಯಿತೆ । ಅಣ್ಣದೇವ ‖೩‖

ವಿಭೀ:- ಆ ದಶರಥ ಪುತ್ರನೊಡನೆ ಕಲಹ ಬೇಡೆಂದಾಕ್ಷಣ ನೀನು ಸೋಲೊಪ್ಪಿಕೊಂಡಂತಾಗಲಾರದು. ಅಂತೆಯೇ ಯುದ್ಧಕ್ಕೆ ಹೆದರಿದ ರಣ ಹೇಡಿಯೆಂದೂ ಆಗಲಾರದು. ಕ್ಷುಲ್ಲಕ ಕಾರಣಕ್ಕಾಗಿ ಮಹತ್ತಾದ ವಿನಾಶ ತಂದು ಕೊಳ್ಳುವವನನ್ನು ಮಹಾ ವೀರನೆಂದೂ ಬುದ್ಧಿವಂತನೆಂದೂ ಜಗತ್ತು ಪ್ರಶಂಸಿಸಲಾರದು.

ನನ್ನ ವಿವೇಕದ ನುಡಿಗಳನ್ನು ವಿಪರೀತವಾಗಿ ಭಾವಿಸುತ್ತಿರುವ ಬುದ್ಧಿ ನಿನಗುಂಟಾಗಿರುವುದು ನಿನ್ನ ವಿನಾಶ ಕಾಲವನ್ನೇ ಸೂಚಿಸುತ್ತಿರುವುದು. "ವಿನಾಶಕಾಲೇ ವಿಪರೀತ ಬುದ್ಧಿ" ಎಂಬ ಮಾತು ಎಂದಿಗೂ ಸುಳ್ಳಾಗಲಾರದು.

ಲೇಸುಬಾರದು ನಿನಗಿದರಿಂದ ತಿಳಿದುಕೊ । ಅಣ್ಣದೇವ ॥ ಈಗ । ನಾ ಸಾರಿದೆನು ಗಂಟಿಕಟ್ಟಿಕೊ ಸೆರಗಿನೊ । ಅಣ್ಣದೇವ ॥೪॥

ವಿಭೀ:- ಅಣ್ಣ, ನಿನ್ನ ಈ ಛಲ, ಹಟಮಾರಿತನಗಳಿಂದ ನಿನಗೆಂದಿಗೂ ಲೇಸುಂಟಾಗಲಾರದು. ಚೆನ್ನಾಗಿ ವಿಚಾರಿಸಿ ನೋಡು. ಇದು ಅವಿವೇಕದ ಪರಮಾವಧಿ; ಸಾರಿ ಸಾರಿ ಹೇಳುತ್ತೇನೆ. ಸೀತೆಯನ್ನು ರಾಮನಿಗೆ ಒಪ್ಪಿಸಿಬಿಡು. ಇಲ್ಲವಾದರೆ ವಿನಾಶ ನಿನ್ನ ಪಾಲಿಗೆ ತಪ್ಪಿದ್ದಲ್ಲ. ನನ್ನ ಮಾತಿನ ಸತ್ಯತೆ ಪರೀಕ್ಷೆ ಮಾಡು. ನೆನಪಿಗಾಗಿ ಸೆರಗಿನಲ್ಲಿ ಗಂಟು ಹಾಕಿಕೋ.

ಎಚ್ಚರಿತಿರುವರೆ ಸಮಯ ಬಂದೊದಗಿದೆ । ಅಣ್ಣದೇವ ॥ ಇಂಥ ಹುಚ್ಚು ಬುದ್ಧಿಯ ತೋರಿ ಸುಮ್ಮಗೆ ಕೆಡಬೇಡ। ಅಣ್ಣದೇವ ॥೫॥

ವಿಭೀ:- ಅಣ್ಣಾ, ಮುಂದೊದಗಬಹುದಾದ ಅನಾಹುತದಿಂದ ಪಾರಾಗಲಿಕ್ಕೆ ಯೋಗ್ಯ ಸಮಯ ಇದೇ ಆಗಿದೆ. ಈಗ ಎಚ್ಚರಗೊಳ್ಳದೆ ಹೋದರೆ ಮುಂದೆ ಪಶ್ಚಾತ್ತಾಪ ಪಡಬೇಕಾಗುವುದು. ಒಣ ಪ್ರತಿಷ್ಠೆಗಾಗಿ ಛಲ ಸಾಧಿಸುವ ಹುಚ್ಚು ಬುದ್ಧಿಯನ್ನು ಇನ್ನಾದರೂ ಬಿಟ್ಟು, ವಿವೇಕದಿಂದ ವರ್ತಿಸು. ವೃಥಾ ಪುತ್ರ ಮಿತ್ರ ಬಾಂಧವರೊಂದಿಗೆ ನಾಶಹೊಂದಿ ಲೋಕದ ಅಪಹಾಸ್ಯಕ್ಕೆ ಗುರಿಯಾಗಬೇಡ.

ಅಪ್ಪುಡೆ ನಿನಗೆ ನಾಚಿಕೆ ಎನ್ನೊಳುಸಿರಯ್ಯ । ಅಣ್ಣದೇವ ॥ ನಾ । ನೊಪ್ಪಿಸಿ ಬರುವೆ ರಾಮನಿಗೆ ಜಾನಕಿಯನ್ನು। ಅಣ್ಣದೇವ ॥೬॥

ವಿಭೀ:- ಅಗ್ರಜಾ, ನೀನು ರಾಕ್ಷಸ ಕುಲಚಕ್ರೇಶ್ವರ ಚತುರ್ದಶ ಭುವನ ವಿಖ್ಯಾತ ತಂದ ಸೀತೆಯನ್ನು ಹಿಂದಕ್ಕೊಪ್ಪಿಸಹೋಗುವುದು ಒಂದು ವೇಳೆ ನಿನಗೆ ಲಜ್ಜಾಸ್ಪದವಾಗಿ ತೋರಬಹುದು. ಅದಕ್ಕಾಗಿ ನೀನು ಯೋಚಿಸ

ಬೇಕಾಗಿಲ್ಲ. ಆ ಕೆಲಸ ನನಗಿರಲಿ. ನಾನು ಆ ಸೀತಾಮಾತೆಯನ್ನು ರಾಮಚಂದ್ರನಿಗೊಪ್ಪಿಸಿ, ಅವನ ಅನುಗ್ರಹ ಸಂಪಾದಿಸಿಕೊಂಡು ಬರುವೆನು ಈ ವಿಚಾರದಲ್ಲಿ ಅನುಮಾನ ಬೇಡ. ನನಗೆ ಅಪ್ಪಣೆ ಕೊಡು.

ವಾರ್ಧಕ

ಕೂಗಿ ಗಗನದಲಿ ನಿಂತಗ್ರಜಗೆ ನೀತಿಯಂ । ಬೇಗದೊಳ್ ಪೇಳ್ವುದಂ ಕೇಳಿ ಖಳನಾಜ್ಞೆಯೊಳ್ । ತಾಗಿದರು ಖಡ್ಗ ತೋಮರ ಕುಂತ ಮೊದಲಾದ ನಾನಾ ವಿಧಾಸ್ತ್ರಗಳಲಿ ॥

ರಾವಣಃ- ಬೃಹತ್ತಾದ ನಮ್ಮ ಸಭೆಯಲ್ಲಿ ಹಾಳು ನಾಲಗೆಯಿಂದ ಹೊಲಸು ಮಾತಾಡಬೇಡವೆಂದು ಸಭೆಯಿಂದ ಹೊರನೂಡಿಸಿದೆ ಆದರೂ ಗಗನದಲ್ಲಿ ನಿಂತು ಮತ್ತೂ ಮತ್ತು ಗಳಹುತ್ತಿರುವೆನಲ್ಲ ಯಾರಲ್ಲಿ ಬಲು ಭಟರು, ಏನು ನೋಡುತ್ತಿರುವಿರಿ. ಆಗಸದಲ್ಲಿ ನಿಂತು ಬೊಗಳುತ್ತಿರುವ ಆ ನಾಯನ್ನು ಬಡಿದೋಡಿಸಿರಿ

ಭಾಗವತ ಜನ ಪರಶು ಬಲು ಭಟರ ನುಗ್ಗರಿದು । ಸಾಗರವನುತ್ತರಿಸಿ ಕಪಿ ಸೈನ್ಯಮಂ ಕಂಡು । ರಾಘವ ಪರಾಕು ಜಯ ಚಿತ್ತಾವಧಾನಮೆಂಬಾಗ ರಥಮಂ ಕಂಡರು ॥ ॥

ವಿಭೀ- ಏನು ದುಷ್ಕಾಲ! ಕೂಳಿಗೆ ಬಿದ್ದ ಈ ಕುನ್ನಿಗಳು ನನ್ನ ಮೈ ಮೇಲೇರಿ ಬಂದರಲ್ಲ! ಬರಲಿ; ಇವರ ಸೊಕ್ಕನ್ನು ಅಡಗಿಸಿ ಬಿಡುತ್ತೇನೆ. ಬಂದಿರುವ ಬಲು ಭಟರಲ್ಲಿ ಹಲವಾರು ಮಂದಿ ಹತರಾಗಿ ಬಿದ್ದಿರುವರು. ಅಣ್ಣನ ಋಣ ತೀರಿತು. ಲಂಕೆಯನ್ನು ತ್ಯಜಿಸಿ, ಸಾಗರವನ್ನುತ್ತರಿಸಿದೆ. ಹತ್ತಿರದಲ್ಲಿಯೇ ವಾನರ ಸೇನೆ ಕಾಣಿಸುತ್ತಿದೆ. ಕಪಿವೀರರು ವೈರಿಬಂದನೆಂದೆಣಿಸಿ ನನ್ನ ಮೇಲೇರಿ ಬರುವ ಮೊದಲೇ ನಾನವರಿಗೆ ವಿರೋಧಿಯಲ್ಲವೆಂದು ತಿಳಿಯುವಂತೆ ಶ್ರೀರಾಮನ ಗುಣಗಾನ ಮಾಡುವುದುತ್ತಮ. ಹರೇ ರಾಮ- ರಘುರಾಮ, ಕೋದಂಡರಾಮ, ಭವವಿರಾಮ, ...ನೀನೇ ರಕ್ಷಿಸು; ರಕ್ಷಿಸು.

ರಾಗ-ಕಾಂಬೋಧಿ–ಝಂಪೆತಾಳ

ಆರಿವನು ಗಗನದಲಿ ಕೈಮುಗಿದು ನುತಿ ಗೈವ। ಶ್ರೀ ರಾಮ ಸಲಹೆಂಬ

ಶರಣ || ಮಾರುತಜ ನೀ ಪೋಗಿ ನೋಡಿ ಬಾರೆಂದೆನುತ| ವೀರ ಸುಗ್ರೀವ ಕಳುಹಿದನು ||೧||

ಸುಗ್ರೀವ:- ಹಾ! ಇದೇನು. ಗಗನದಲ್ಲಿ ರಾಮ ಧ್ಯಾನ! ಓಹೋ, ಯಾರೋ ನಾಲ್ಕೈದು ಮಂದಿ ರಥದಲ್ಲಿ ಕುಳಿತು ಆಕಾಶದಲ್ಲಿರುವರು ಅದರಲ್ಲೂ ಶ್ರೀ ರಾಮ ದಿವ್ಯನಾಮ ಜಪಿಸುತ್ತಿರುವರು ಯಾರಿರಬಹುದು? ಏಕೆ ಬಂದಿರಬಹುದು? ರಕ್ಕಸರ ಮಾಯೆಯೇನಾದರೂ ಇರಬಹುದೆ? ಪರಾಂಬರಿಸಬೇಕಾಯಿತು. ಮುಖ್ಯಪ್ರಾಣ, ಆಗಸದಲ್ಲಿರುವವರ ಬಳಿಗೆ ನೀನೀಗಲೇ ತೆರಳಿ ಅವರ್‍ಯಾರು, ಏಕೆ ಬಂದಿರುವರು, ಅವರ ಉದ್ದೇಶವೇನು ಇತ್ಯಾದಿ ವಿವರತಿಳಿದು, ಬೇಗನೆ ಬಾ. ಹೋಗು.

ಬಂದು ಮಾತಾಡಿಸಿದನಾ ವಿಭೀಷಣನ ದಶ| ಕಂಧರನ ಕಲಹ ಕಾರಣವ|| ಹೊಂದಿಕೆಯ ತಿಳಿದು ರಘುಪತಿಗೆ ಸೂಚಿಸೆ ಕರೆಸ| ಲಂದು ಪೊಡಮಡುತ ನಡೆತಂದ ||

ಮುಖ್ಯಪ್ರಾಣ:- ನಮ್ಮೊಡೆಯ ಸುಗ್ರೀವನ ಆದೇಶದಂತೆ ಆಗಸಕ್ಕೇರಿ ಬಂದವರಾರೆಂದು ಪರಿಶೀಲಿಸಿದೆ. ಬಂದವರು ವಿಭೀಷಣ ಮತ್ತವನ ಸಚಿವರು. ಬಂದ ವಿಚಾರ ತಿಳಿದೆ. ರಘುರಾಮ ಸುಗ್ರೀವಂಗೆ ವರದಿ ಒಪ್ಪಿಸುತ್ತೇನೆ.

ಪ್ರಭೋ, ಲಾಲಿಸಬೇಕು. ಬಂದವನು ರಾವಣ ಸಹೋದರನಾದ ವಿಭೀಷಣ ಮತ್ತವನ ಮಂತ್ರಿಗಳು ವಿಭೀಷಣ ದುರುಳನಲ್ಲ; ನೀತಿ ವಿಶಾರದ, ಶೂರ, ಧೀರ, ಗಂಭೀರ, ಉದಾರಿ ಹಾಗೂ ವಿವೇಕಿ. ಪಾಪಮಾರನಾದ ವೈಷ್ಣವಾಗ್ರಣಿ. ಶ್ರೀ ಚರಣದಲ್ಲಿ ಅತ್ಯಂತಪೂಜ್ಯಭಾವವುಳ್ಳವ. ಅಣ್ಣನ ಅಕೃತ್ಯಕ್ಕೆ ನೊಂದು, ಸಾಕಷ್ಟು ನೀತಿ ಹೇಳಿದನಂತೆ. ದುರುಳ ರಾವಣನು ಈತನನ್ನು ಬೈದು ಹೊರದೂಡಿಸಿದನಂತೆ. ದೇವರಚರಣದಲ್ಲಿ ಶರಣಾಗತನಾಗಿ ಆಶ್ರಯ ಬೇಡಲು ಬಂದಿದ್ದಾನೆ.

ಶ್ರೀರಾಮ:- ಸುಗ್ರೀವ ,ಜಾಂಬವ ಲಕ್ಷ್ಮಣಾದಿಗಳು ಆಲಿಸಬೇಕು. ಹನುಮನ ಮಾತು ಯಥಾರ್ಥವಾಗಿರಬೇಕು. ಹೇಗಿದ್ದರೂ ರಣದೊಳಿದಿರಾದವರ ಇರಿವುದು, ಶರಣು ಬಂದವರ ಪೊರೆವುದು ರಾಜಧರ್ಮ. ನಾವು ಬಲಹೀನರಾಗಿ

ವೈರಿ ಬಂದವರ ವಿಚಾರದಲ್ಲಿ ಭಯವೆಣಿಸಬೇಕಾದುದು ಸಹಜ. ನಾವೇನೂ ಬಲಹೀನರಲ್ಲ. ಹಾಗೆಂದ ಮೇಲೆ ನಾವು ಶಂಕಿಸಬೇಕಾಗಿಲ್ಲ. ತನುತೆತ್ತಾದರೂ ಮರೆಹೊಕ್ಕವರನ್ನು ಸಲಹುವ ಶೀಲ ನಮ್ಮ ವಂಶದ ಹಿರಿಯ ಗುಣ ಆದ್ದರಿಂದ ವಿಭೀಷಣಾದಿಗಳನ್ನು ಬರಹೇಳೋಣ. ಆಶ್ರಯ ನೀಡೋಣ.

ವಿಭೀಷಣ:– ಏನು ದೇವರ ಅಪ್ಪಣೆಯಾಯಿತೇ? ಒಳ್ಳೇದು. ಅಹಾ! ರಘುಪತಿಯ ಹೃದಯ ಎಷ್ಟೊಂದು ಪರಿಶುದ್ಧ; ದಯಾಮಯ. ವಿರೋಧಿಯ ಸಹೋದರನೆಂದು ಅನುಮಾನಿಸಿದನೇ? ತಿರಸ್ಕರಿಸಿದನೇ? ಇಲ್ಲ, ಇಲ್ಲ. ಆದರದ ಸ್ವಾಗತ ನೀಡಿದ್ದಾನೆ. ಆಯುಧಗಳನ್ನು ರಥದಲ್ಲಿರಿಸಿ ಪಾದಚಾರಿಯಾಗಿ ಹೋಗಿ ಶ್ರೀರಾಮನ ಪಾದಕ್ಕೆ ವಂದಿಸುತ್ತೇನೆ.

ರಾಗ-ಭೈರವಿ-ತ್ರಿವುಡೆತಾಳೆ

ರಾಮ ರಾಮ! ದಶರಥ। ರಾಮ ರಾಮ ॥ ಪ ॥ ಕಾಮಪಿತ ಕಮಲಾಕ್ಷ ಸಂಗರ।ಭೀಮ ಬಲು ನಿಸ್ಸೀಮ ಸೀತಾ।ರಾಮ ರಾಮ ॥ ಅ.ಪ. ॥

ವಿಭೀ:- ರಾಮ ರಾಮ, ರಘುರಾಮ, ಶ್ರೀ ರಾಮ ಸೀತಾರಾಮ, ದಶರಥರಾಮ ಕೋದಂಡರಾಮ, ಸಮರ ನಿಸ್ಸೀಮ, ವೈರಿ ಕುಲವಿರಾಮ, ಧುರಧುರಂಧರ ಭೀಮ, ಕಾಮಪಿತ, ಕಮಲಾಕ್ಷ ಸೀತಾಪತೇ ರಕ್ಷಿಸು ರಕ್ಷಿಸು.

ವೀರ ವಿತರಣ ವಿಜಯ ಸದ್ಗುಣ। ಸಾರವರ ಕೇಯೂರ ಕಂಕಣ। ಹಾರ ಶರಧಿ ಗಭೀರ ಖಳ ಸಂ। ಹಾರ ಮತಿ ವಿಸ್ತಾರ ನತಮಂ।ದಾರ ಶಾಸ್ತ್ರ ವಿಚಾರ ಧರ್ಮೋದ್ಧಾರ ನಿಗಮ ವಿದೂರ ನಿತ್ಯ ವಿ। ಚಾರ ಶುಭದಯ ಸಾರ ಪಾರಾ। ವಾರ ಕರುಣಾಸಾರ ಶ್ರೀ ರಘು। ರಾಮ ರಾಮ ॥ ೧ ॥

ವಿಭೀ:-ಅನಾಥ ಬಂಧು, ಕರುಣಾಸಿಂಧು, ವೀರಾಧಿವೀರ, ಸದ್ಗುಣಸಾರ ಹಾರ ಕಂಕಣ ಕೇಯೂರ ಶೋಭಿತ. ಶರಧಿಸಮ ಗಂಭೀರ, ಖಳ ಕುಲ ಸಂಹಾರ ನತ ಮಂದಾರ, ಶಾಸ್ತ್ರ ವಿಚಾರ ವಿಹಾರ, ಧರ್ಮೋದ್ಧಾರ, ನಿಗಮಾಗಮ ವಿಚಾರ, ಶುಭೋದಯ ಸಾರ ವಿಚಾರ, ಭಕುತಜನರುದ್ಧಾರ, ಕರುಣಾಕರ, ಹೇ ದೇವ, ದೇವಾಧಿದೇವ, ಕಾಪಾಡು, ಕಾಪಾಡು,

ತಂದೆಯಾಡಿದ ಮಾತಿಗೋಸುಗ। ಬಂದು ಪಂಚವಟೀ ಪ್ರದೇಶದೊ। ಳಂದು ಖರ ದೂಷಣರ ರಣದೊಳು | ಕೊಂದು ಮಾಯಾ ಹರಿಣವನು ಎಸೆ ದಂದು ಸೀತೆಯನೊಯ್ವ ರಾವಣ | ನೆಂದು ಬಿನ್ನೈಸಿದ ಜಟಾಯುವ। ನೆಂದು ಕಾಯ್ದ ಮಹಾತ್ಮನಾ ನಡೆತಂದು ಸಲಹು ಪರಾಕು ಜಯ ಜಯ || ರಾಮ ರಾಮ ॥ ೨ ||

ವಿಭೀ:-ಹೇ ದೇವ, ಜಗತ್ತಿನಲ್ಲಿ ಹೆಚ್ಚಿದ ಅನ್ಯಾಯ, ಅಧರ್ಮಗಳನ್ನು ನಿವಾರಿಸಿ, ಧರ್ಮ ಸಂಸ್ಥಾಪಿಸಲು ಭೂಮಿಯಲ್ಲಿ ಅವತರಿಸಿದವನು ನೀನು. ನಿನ್ನ ನಡತೆಯಿಂದ ಲೋಕದ ಜನರನ್ನು ಸನ್ಮಾರ್ಗವಲಂಬಿಗಳನ್ನಾಗಿ ಮಾಡಲು ತೊಡಗಿರುವೆ. ತಂದೆಯ ಮಾತನ್ನು ಉಳಿಸಲಿಕ್ಕಾಗಿ ಸಂಪತ್ಸಮೃದ್ಧ ವಾದ ರಾಜ್ಯಾಧಿಕಾರವನ್ನು ಬಿಟ್ಟು ಅರಣ್ಯ ಸೇರಿದೆ. ಪಂಚವಟಿಯಲ್ಲಿದ್ದಾಗ ನಿನ್ನ ಮೇಲೇರಿ ಬಂದ ಖರ ದೂಷಣಾದಿಗಳನ್ನು ಲೀಲಾಜಾಲವಾಗಿ ಸಂಹರಿಸಿದೆ. ಹರಿಣ ರೂಪದಲ್ಲಿ ಬಂದು, ವಂಚಿಸಿದ ಮಾಯಾವಿ ಮಾರೀಚನನ್ನು ವಧಿಸಿದೆ. ಸೀತಾಪಹಾರ ಮಾಡಿದವ ರಾವಣನೆಂದು ವರದಿ ಮಾಡಿದ ಜಟಾಯುವಿಗೆ ಮೋಕ್ಷವಿತ್ತೆ. ಕಬಂಧನನ್ನುದ್ಧರಿಸಿ, ಶಬರಿಯನ್ನು ಸಂತೈಸಿ, ವಾಲಿಯನ್ನು ಸಂಹರಿಸಿ, ವಾನರ ಪಡೆ ಸಹಿತ ನಡೆತಂದ ಮಹಾಮಹಿಮನಾದ ನಿನಗಿದೋ ಸಹಸ್ರ ವಂದನೆಗಳು. ಶ್ರೀರಾಮ ಜಯರಾಮ ಜಯ ಜಯರಾಮ ಜಯ ಜಯ

ಭಾಮಿನಿ

ಫಣಿಶಯನ ಪರಮಾತ್ಮ ಮಾಧವ। ತ್ರಿಣಯಸಖ ತ್ರೈಜಗದ ರಕ್ಷಕ ಪ್ರಣವರೂಪ ಪರೇಶ ನಾರಾಯಣ ನಮೋ ॥

ವಿಭೀ:-ಉರಗಶಯನ, ಗರುಡಗಮನ, ಲಕ್ಷ್ಮೀರಮಣ, ಪರಮೇಷ್ಠಿ ತಾತ, ಪರಮೇಶ ಸುಪ್ರೀತ, ಪ್ರಣವ ಸ್ವರೂಪ, ಪರಮಾತ್ಮ, ಆರ್ತಜನೋದ್ಧ ರಣ, ನಾರಾಯಣ ನಮೋ ನಮಃ

ಮಣಿವುತಯ್ತು ಹ ಮಂತ್ರಿಗಳ ಸಹ। ವನಜಲೋಚನ ಕಾಣುತಲೆ ಲ। ಕ್ಷ್ಮಣನ ನೋಡಲು ಕರವ ಮುಗಿದಾ ಹನುಮನಿಂತೆಂದ ||

ಶ್ರೀರಾಮ:-ಭಗವಂತನನ್ನು ಸ್ತುತಿಸುತ್ತ ಈ ಕಡೆಗೆ ಬರುತ್ತಿರುವ ಇವನನ್ನು ಕಾಣುವಾಗ ವೈಷ್ಣವ ಕುಲಾಗ್ರಣಿ, ಸಾಧು ಪುರುಷ, ಪಾಪಭೀರು ಎಂಬ ಭಾವನೆಯಾಗುತ್ತಿದೆ. ಅಯ್ಯಾ, ಲಕ್ಷ್ಮಣ, ಹನುಮಂತ ಮೊದಲಾದವರಿಗೆ ಹೇಗೆ ತೋರುತ್ತಿದೆ ? ಹೇಳಿರಿ.

ರಾಗ–ಕೊರವಿ-ಅಷ್ಟತಾಳ

ದೇವ ಚಿತ್ತೈಸಯ್ಯ ಬಂದ ರಾಕ್ಷಸನೀತ | ರಾವಣನ ಸಹಜಾತ॥ಸಜ್ಜನರೊಳು । ಕೋವಿದನತಿ ಪ್ರಖ್ಯಾತ ॥ ೧ ॥

ಹನುಮ:-ದೇವರ ಚಿತ್ತಕೆ ವೇದ್ಯವಾಗದ ವಿಚಾರವೇನೂ ಇಲ್ಲ. ಆದಾಗ್ಯೂ ನಮ್ಮ ಅಭಿಪ್ರಾಯ ಕೇಳಿದ್ದರಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಬಂದಿರುವ ಈ ವಿಭೀಷಣ ರಾಕ್ಷಸ ಕುಲೋತ್ಪನ್ನ; ಅಲ್ಲದೆ ನಮ್ಮ ಶತ್ರುವಾದ ರಾವಣನ ಸಹೋದರನೆಂಬುದು ನಿಜ. ಆದರೆ ಗುಣ, ನಡತೆ, ಸ್ವಭಾವ, ಆಚಾರಗಳು ರಾಕ್ಷಸರಂತಿಲ್ಲ. ಸಜ್ಜನರಲ್ಲಿ ಶ್ರೇಷ್ಠ, ವೀರರಲ್ಲಿ ವೀರ. ಮಹಾ ಜ್ಞಾನಿಯಾದ ಈತನು ತನ್ನ ಸೌಜನ್ಯ ವಿವೇಕಾದಿ ಸದ್ಗುಣಗಳಿಂದ ಮಹಾ ಪ್ರಖ್ಯಾತನಾಗಿದ್ದಾನೆ;

ಸೀತೆಯ ಬಿಡು ಎಂಬ ಮಾತ ಪೇಳಿದನೆಂದು|ಈತನ ಜರೆದನಂತೆ । ಪಟ್ಟಣದಿಂದಲಾತ ನೂಕಿಸಿನಂತೆ ॥ ೨ ॥

ಹನುಮ:- ಸೆರೆಯಲ್ಲಿರಿಸಿದ ಸೀತಾದೇವಿಯನ್ನು ಸನ್ನಿಧಾನಕ್ಕೊಪ್ಪಿಸಿ. ಪಾದದ ಮರೆ ಸೇರು ಎಂದು ಅಣ್ಣನಿಗೆ ಬಹುವಾಗಿ ಬೋಧಿಸಿದನಂತೆ. ನೀತಿ ಕೋವಿದನಾದ ಈತನ ಮಾತಿನಿಂದ ನೀತಿಗೆಟ್ಟ ರಾವಣ ಖಾತಿ ತಾಳಿದನಂತೆ. ಬೈದು ಭಂಗಿಸಿ, ಪಟ್ಟಣದಿಂದ ಹೊರ ನೂಕಿಸಿದನಂತೆ.

ಕಾರಣಗಳನು ತಿಳಿದು ಮುಂದೆ ಬಪ್ಪಂಥ । ಮಾರಿಗೆ ಬೆದರಿ ತಾನು ॥ ತನ್ನಯ ಮನ ಸೇರದಿಲ್ಲಿಗೆ ಬಂದನು ॥ ೩ ||

ಹನುಮ:-ಮಹಾಜ್ಞಾನಿಯೂ ವಿವೇಕಿಯೂ ಆದ ಈತನು ಮುಂದೊದಗ

ಬಹುದಾದ ದುರಂತವನ್ನು ಗ್ರಹಿಸಿ, ವಿನಾ ಕಾರಣ ದೈವದ ಆಗ್ರಹಕ್ಕೆ ತುತ್ತಾಗಿ ನರಕ ಸೇರುವುದಕ್ಕೆ ಮನಸ್ಸೊಪ್ಪದೆ, ದೈವಾನುಗ್ರಹಕಾಂಕ್ಷಿಯಾಗಿ ಇಲ್ಲಿಗೆ ಬಂದಿರುತ್ತಾನಂತೆ.

ಸಾರಿ ಪಾದಾಂಬುಜ ಸೇರಿ ಬದುಕಿ ಬಂದ । ವೀರ ವಿಭೀಷಣನು ॥ ಇವರ್ ಪೂರ್ವದ | ನಾಲ್ವರು ಮಂತ್ರಿಗಳಂತೆ ||೪॥

ಹನುಮ:- ಶ್ರೀ ದೇವರ ಪಾದಾಂಬುಜಗಳಿಗೆ ಶರಣು ಬಂದಿದ್ದಾನೆ. ಮರೆಸೇರಿದವರನ್ನು ಪೊರೆವ ಬಿರುದುಳ್ಳ ಸನ್ನಿಧಾನದ ಸೇವೆ ಮಾಡಿ ಧನ್ಯನಾಗ ಬೇಕೆಂಬ ಹಿರಿಯಾಶೆಯಿಂದ ಬಂದವನೇ ಹೊರತು ಇನ್ನಿತರ ಯಾವ ಮಾಯೆ ವಂಚನೆಸಾಧಿಸಲು ಬಂದವನಲ್ಲ. ಜತೆಯಲ್ಲಿರುವ ನಾಲ್ವರು ಮಂತ್ರಿಗಳು ಇವ ನಂತೆಯೇ ಸಜ್ಜನರು.

ರಾಗ- ಮಧ್ಯಮಾವತಿ-ಏಕತಾಳ

ನೆಚ್ಚಬಾರದೀತನಂತರಂಗವ ಕೇಳಿ । ಆಶ್ಚರ್ಯವಾಯಿತು ನಮಗೆಲ್ಲ ॥ ಹುಚ್ಚು ಮಾತು ಅಣ್ಣ ತಮ್ಮಂದಿರೆಂಬಂಥ | ವಾತ್ಸಲ್ಯಗಳ ಬಿಟ್ಟು ವೈರತ್ವ ವೆಂಬುದ ||೧||

ಸುಗ್ರೀವ:- ದೇವ, ವನ್ನ ಅಭಿಪ್ರಾಯ ಅವಧರಿಸಬೇಕು, ಬಂದಿರುವ ವಿಭೀಷಣನ ವಿಚಾರವನ್ನು ಕೇಳಿದಂತೆ ಆಶ್ಚರ್ಯದೊಂದಿಗೆ ಸಂಶಯವೂ ಬಲ ವಾಗುತ್ತಿದೆ· ನೀತಿಯುಸುರಿದ ಸಹಜಾತನ ಮಾತಿಗೆ ಕೋಪಗೊಂಡು ಅಣ್ಣನು ಊರ ಹೊರಹಾಕಿದನೆಂದರೆ ನಂಬಲಾಗದು ಅಣ್ಣ ತಮ್ಮಂದಿರಲ್ಲಿ ಸಹಜವಾಗಿಪ್ಪ ವಾತ್ಸಲ್ಯ ಕಳೆದು ವೈರತ್ವವುಂಟಾಯಿತೆಂಬುದು ಹುಚ್ಚು ಮಾತು. ಅಣ್ಣ ನೆಂದರೆ ಸಾಮಾನ್ಯನೆ?

ದೇವೇಂದ್ರ ಮೊದಲಾದ ದೇವತೆಗಳು ನಿತ್ಯ ಸೇವೆಯ ಮಾಡಿಕೊಂಡಿ ಹರಂತೆ ।! ಜೀವವೊಂದೊಡಲೆರಡೆನ್ನುವಂತಗ್ರಜ । ರಾವಣೇಶ್ವರನ ಭಾಗ್ಯವ ಬಿಟ್ಟು ಬಂದುದ ||೨||

ಸುಗ್ರೀವ:- ರಾವಣನು ಅಷ್ಟ ಭಾಗ್ಯ, ಅಷ್ಟಭೋಗಗಳಿಂದ ಸಮನ್ವಿತ

ನಾದ ಭಾಗ್ಯಶಾಲಿ, ಇಂದ್ರಾಗ್ನಿ ಯಮ ಮೊದಲಾದ ಅಷ್ಟ ದಿಕ್ಪಾಲಕರಿಂದ ಸೇವೆ ಪಡೆದುಕೊಳ್ಳುತ್ತಿರುವ ರಾಕ್ಷಸ ಚಕ್ರವರ್ತಿ. ಚತುರ್ದಶ ಭುವನದಲ್ಲಣ ನೆಂಬ ಬಿರುದುಳ್ಳ ವೀರಾಗ್ರೇಸರ. ಅಂತಹ ರಾವಣೇಶ್ವರನ ಪ್ರೀತಿಯ ಸಹೋದರ ನೆಂದು ಪ್ರಖ್ಯಾತನಾದವ ವಿಭೀಷಣ. ದೇಹವೆರಡು ಜೀವವೊಂದು ಎಂಬಂತಿದ್ದ ಅಗ್ರಜಾನುಜರು ಎಂಬ ವಾರ್ತೆ ಕೇಳಿದ್ದೇನೆ. ಅಂತಹ ಭಾಗ್ಯ, ಅಧಿಕಾರ, ಪ್ರೀತಿ. ಖ್ಯಾತಿ ಬಿಟ್ಟು ಬಂದನೆಂದರೆ ನಂಬುವುದೆಂತು?

ತಂದೆಯೊಬ್ಬ ತಾಯೊಬ್ಬಳಿಗೆ ಪುಟ್ಟಿದ ಮೇಲೆ। ಬಂದುದೆ ವೈರತ್ವ ಸೋದರರಿಗೆ ॥ ಹೊಂದಿಕೆ ಮಾತಲ್ಲ ಹೊಸ ಪರಿಯಾಗಿದೆ। ಯೆಂದಿನಸುತನೆನೆ ರಾಘವನೆಂದನು ||೧||

ಸುಗ್ರೀವಃ–ಈ ರಾವಣ ವಿಭೀಷಣರು ಒಂದೇ ತಂದೆಯ ಮಕ್ಕಳು; ಮಾತ್ರವಲ್ಲ, ಒಂದೇ ತಾಯ ಬಸುರಿಂದ ಬಂದವರು. ಬಾಲ್ಯದಿಂದ ಈವರೆಗೆ ಅನ್ಯೋನ್ಯರಾಗಿದ್ದವರು. ಇಂತಹ ಸಹೋದರರಲ್ಲಿ ಇಂತಹ ಕ್ಷುಲ್ಲಕ ಕಾರಣ ಕ್ಕಾಗಿ ಪರಸ್ಪರರನ್ನು ದ್ವೇಷಿಸುವಷ್ಟರ ಮಟ್ಟಿನ ವೈರತ್ವವುಂಟಾಯಿತೆಂಬುದು ಸತ್ಯಕ್ಕೆ ಹೊಂದಿಕೆಯಾಗದ ಹೊಸ ಮಾತೇ ಸರಿ. ಇದನ್ನು ಹೇಗೆ ನಂಬಲಿ? ನಂಬಿದರೆ ಮುಂದೆ . . . .

ರಾಗ-ಭೈರವಿ-ಝಂಪೆ

ಕಪಿರಾಯ ಕೇಳು ಕೈ ಮುಗಿದು ಮರೆ ಹೊಕ್ಕವರು । ಕಪಟದವ ರಾದರೆಯು । ಕಾಯ್ವುದೇ ಬಿರುದು || ೧ ॥

ಶ್ರೀರಾಮಃ–ವಾನರೇಶ್ವರ, ನಿನ್ನ ಮಾತುಗಳೇನೋ ಯುಕ್ತಿ ಯುಕ್ತ ವಾಗಿವೆ ಆದರೆ ನನ್ನ ಅಭಿಪ್ರಾಯವನ್ನು ಸಾವಧಾನದಿಂದ ಆಲಿಸು. ಈ ವಿಭೀಷಣನು ಯಾರೇ ಇರಲಿ, ಎಂಥವನೇ ಇರಲಿ; ಇಂವವನು ನಮ್ಮ ಮರೆ ಹೊಕ್ಕ ಶರಣಾಗತ. ಇಂತಹ ವ್ಯಕ್ತಿ ಎಂಥವನಾದರೂ ನಮ್ಮಿಂದ ಕಾಪಾಡಲ್ಪ ಡಬೇಕಾದವನು. ಶರಣಾಗತ ರಕ್ಷಕರು ಎಂಬ ನಮ್ಮ ಬಿರುದು ನಮ ಕುಲ ಕ್ರಮಾಗತವಾದುದು. ನೀನು ಆಕ್ಷೇಪಿಸಿದ ಕಾರಣಗಳಿಗೆ ಸಮಾಧಾನ ಕೇಳು

ಜನನಿಯೊಂದಾದರೆಯು ಮನಸಿನಂತರ ಬೇರೆ | ಕನಕವೊಂದಾದರೆಯು ಆಭರಣ ಬೇರೆ ।। ೨ ||

ಶ್ರೀರಾಮ:-ತಾಯಿಯೊಬ್ಬಳೇ ತಂದೆಯೊಬ್ಬನೇ ಆದ ಮಾತ್ರಕ್ಕೆ ಸಹೋದರರ ಅಭಿಪ್ರಾಯ ಒಂದೇ ಆಗಬೇಕಾಗಿಲ್ಲ; ಗುಣವೊಂದೇ ಆಗಿರಬೇಕೆಂದೇನೂ ಇಲ್ಲ. ಒಂದೇ ಗಣಿಯಿಂದ ಅಗೆದು ತೆಗೆದ ಬಂಗಾರವೊಂದೇ ಆದರೂ ಅದರಿಂದ ತಯಾರಾಗಬಹುದಾದ ಆಭರಣ ನಾಣ್ಯಾದಿ ಒಡವೆ ವಸ್ತುಗಳೆಲ್ಲ ಬೇರೆ ಬೇರೆ ಆಕಾರದಿಂದ ಶೋಭಿಸುವುದಿಲ್ಲವೇ? ಅವುಗಳ ಉಪಯೋಗವೂ ಬೇರೆ ಬೇರೆ.

ಏಕ ಮೃತ್ಪಿಂಡದೊಳನೇಕ ಪಾತ್ರಗಳಹವು । ಲೋಕೇಶ ಬರೆದ ಲಿಪಿಯದು ತಪ್ಪಲಹುದೆ ॥ ೩ ||

ಶ್ರೀರಾಮ:-ಸುಗ್ರೀವ, ವಿಚಾರಿಸಿ ನೋಡು, ಮಣ್ಣು ಒಂದೇ ಇರಬಹುದು. ತಯಾರಿಸಿದ ಕುಲಾಲ ಒಬ್ಬನೇ ಇರಬಹುದು, ಆದರೆ ತಯಾರಿಸಲ್ಪಡುವ ಗಡಿಗೆ ಮಡಿಕೆ ಕುಡಿಕೆಗಳು ಬೇರೆ ಬೇರೆ. ಒಂದರಲ್ಲಿ ಹಾಲು ಕಾಯಿಸಬಹುದು; ಒಂದರಲ್ಲಿ ಮಾಂಸ ಬೇಯಿಸಬಹುದು ಒಂದರಲ್ಲಿ ದೇವರ ನೈವೇದ್ಯ ತಯಾರಿಸಿದರೆ, ಇನ್ನೊಂದು ಭಿಕ್ಷಾಪಾತ್ರೆಯಿರಬಹುದು. ಒಂದರಲ್ಲಿ ದೇವರ ತೀರ್ಥ ತುಂಬಿದರೆ, ಇನ್ನೊಂದರಲ್ಲಿ ಮದ್ಯ ತುಂಬಿಡಬಹುದು. ಎಲ್ಲವೂ ಅವರವರ ಕರ್ಮಶೇಷಕ್ಕನುಗುಣವಾಗಿ ವಿಧಿ ವಿಧಿಸಿದ ನಿಯಮಕ್ಕನುಸಾರ ಬುದ್ಧಿ, ನಡತೆ, ಗುಣ ಬದಲಾಗುವುದೆಂದು ತಿಳಿ. ಇದಕ್ಕೆ ನೀನೂ ನಿನ್ನ ಅಣ್ಣನೂ ಉದಾಹರಣೆಯಾಗಿರುವಾಗ ಬೇರೆ ಯೋಚನೆಯೇಕೆ? ವಿಭೀಷಣ, ಇತ್ತ ಬಾರಯ್ಯ.

ವಿಭೀ:-ದೇವ, ಇದೋ ವಂದಿಸಿದ್ದೇನೆ.

ವಾರ್ಧಕ

ಶಿರವ ಪಿಡಿದೆತ್ತಿ ಪತಿಕರಿಸಿ ಲಂಕಾಪುರದ । ಅರಸ ರಾವಣನಿಂದ ಮೇಲೀತನೆಂದು ಸ । ರ್ವರ ಮುಂದೆ ಪಟ್ಟಾಭಿಷೇಕಮಂ ಮಾಡಿದರು ವರ ವಿಭೀಷಣ ದೇವಗೆ ॥

ಶ್ರೀರಾಮ:-ಅಯ್ಯಾ, ವಿಭೀಷಣ. ಹೀಗೆ ಬಾ. ಕುಳಿತುಕೋ. ಸದ್ಗುಣ ಶೀಲನಾದ ನಿನ್ನನ್ನು ನಾವು ಅತ್ಯಂತ ಮರ್ಯಾದೆಯಿಂದಲೂ ಪ್ರೀತಿಯಿಂದಲೂ ಸ್ವಾಗತಿಸುತ್ತೇವೆ. ನಮ್ಮ ನಂಬುಗೆಗೆ ಪಾತ್ರನಾಗುವಂತೆ ಪ್ರಾಮಾಣಿಕತೆಯಿಂದ ನಡೆದುಕೊಳ್ಳುವುದು ನಿನ್ನ ಪಾಲಿನ ಕಾರ್ಯ. ಇದೋ ಈಗ ಲಂಕೆಯ ಅರಸ ರಾವಣ. ಆದರೆ ರಾವಣನ ನಂತರ ಲಂಕೆಗೆ ನೀನೇ ಅರಸನು. ನಮ್ಮ ಮಿತ್ರರಾದ ಈ ವಾನರ ವೀರರ ಸಮಕ್ಷಮದಲ್ಲಿ ಈಗಲೇ ನಿನಗೆ ಲಂಕಾರಾಜ್ಯದ ಪಟ್ಟಾಭಿಷೇಕ ನಡೆಸಲಿರುವೆವು. ಅದೋ, ದೇವತೆಗಳು ದೇವ ದುಂದುಭಿ ಬಾರಿಸಿ ಹೂಮಳೆಗರೆದು, ತಮ್ಮ ಸಂತೋಷ ಪ್ರದರ್ಶಿಸಿ, ಆಶೀರ್ವದಿಸುತಿದ್ದಾರೆ. ನಿನ್ನ ಅಧಿಕಾರಾವಧಿಯಲ್ಲಿ ಲಂಕೆಯ ಪ್ರಜೆಗಳು ಸಂತೋಷ ಹಾಗೂ ಸುಖ ಸಮೃದ್ಧಿ ಹೊಂದಿ ಶಾಂತಿಯನ್ನು ಅನುಭವಿಸುವಂತಾಗಲಿ ಎಂದು ಮನಃಪೂರ್ವಕ ಹಾರೈಸುತ್ತೇನೆ.

(ಕಪಿವೀರರು:-ವಿಭೀಷಣನಿಗೆ ಜಯವಾಗಲಿ. ಶ್ರೀರಾಮ ಲಕ್ಷ್ಮಣರಿಗೆ ಜಯವಾಗಲಿ ಎಂದು ಉದ್ಘೋಷಿಸಿದರು.)

ಸಂಪೂರ್ಣ